# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA








ಸಂಪುಟ:01 • ಸಂಚಿಕೆ:176 • ನೋಂದಣಿ ನಂ.:KARKAN27911 • ವಿಜಯನಗರ • 06.12.2023 • ಬುಧವಾರ • ಪುಟ:04 • ಬೆಲೆ:2

Volume:01 • Issue:176 • Reg.No:KARKAN27911 • VIJAYANAGARA • 06.12.2023 • Wednesday • Page:04 • Rs:2


ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.


PLACE YOUR AD
HOUSE RENT / SALE / LEASE, CHANGE OF NAME,
Notice Advertisement. & EVENT COVERAGE
Contact
9448633038
Near Valmiki Circle,
HOSAPETE-583201
Email:hampitimes@gmail.com


# ಮಕ್ಕಳ ಲ್ಯಾಪ್‌ಟಾಪ್‌ಗೂ ಲಂಚ ಕೇಳ್ತಾರೆ !

## ಕೊಟ್ಟೂರು ಕಾರ್ಮಿಕ ಇಲಾಖೆ ಕಚೇರಿಯಲ್ಲಿ ಲಂಚದ ಸದ್ದು | ಲಂಚ ಕೊಟ್ರೆ ಓಕೆ ಇಲ್ದಿದ್ರೆ ಅಲೆದಾಟ | ಕಾರ್ಮಿಕರ ಗೋಳು ಕೇಳುವವರಾರು?

■ **ಹಂಪಿ ಟೈಮ್ಸ್ ಕೊಟ್ಟೂರು**

ಕೂಲಿ ಮಾಡಿ ಬದುಕು ಕಟ್ಟಿಕೊಳ್ಳುವುದೇ ದುಸ್ಥರವಾಗ್ಯೆತ್ರಿ. ಮಕ್ಕಳು ನಾಲ್ಕು ಅಕ್ಷರ ಕಲಿಲಿ ಅಂತ ವಿದ್ಯಾಭ್ಯಾಸಕ್ಕೆ ಕಳಿಸಿದ್ರೆ ಅಲ್ಲಿ ಸಿಗುವ ಸರ್ಕಾರದ ಸೌಲಭ್ಯ ಕೊಡಲು ಲಂಚ ಕೇಳ್ತಾರೆ. ಬಡವರು ಎಲ್ಲಿಂದ ತರಬೇಕ್ರಿ. ಇದ್ದವರು ಕೊಡ್ತಾರೆ ಇಲ್ಲದವರಿಗೆ ಅಲೆದಾಡಿಸುತ್ತಾರೆ. ಬಡವರ ಮಕ್ಕಳ ಕನಸು ಕಮರುತ್ತಿವೆ ನಮ್ಮ ಗೋಳು ಕೇಳೋರು ಯಾರು ಇಲ್ಲವೇ ಎಂದು ಕಾರ್ಮಿಕರು ನೋವು ತೋಡಿಕೊಳ್ಳುತ್ತಿದ್ದಾರೆ.

ಕಾರ್ಮಿಕರ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸರ್ಕಾರ ನೀಡುವ ಉಚಿತ ಲ್ಯಾಪ್‌ಟಾಪ್‌ಗೆ ಕೂಡ್ಲಿಗಿ–ಕೊಟ್ಟೂರು ಉಭಯ ತಾಲೂಕಿನ ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ 3 ರಿಂದ 4 ಸಾವಿರ ರೂ. ಲಂಚ, ಕೊಟ್ರೆ ಮಾತ್ರ ಅರ್ಹ ಫಲಾನುಭವಿಗಳಿಗೆ ಲ್ಯಾಪ್‌ಟಾಪ್, ಇಲ್ಲದಿದ್ದರೆ ಇಲಾಖೆಯ ಜಿಲ್ಲಾ ಕಚೇರಿ ಹೊಸಪೇಟೆಗೆ ಅಲೆದಾಟ ಶತಸಿದ್ಧಿ ಎನ್ನುವುದು ಕಾರ್ಮಿಕರ' ಆರೋಪದ ಆಕ್ರೋಶ ನುಡಿಗಳಾಗಿವೆ.




2020ರ ಹಿಂದೆ ನೋಂದಣಿ ಹೊಂದಿದ ಕಾರ್ಮಿಕರರ ಮಕ್ಕಳು ಎಸ್.ಎಸ್.ಎಲ್.ಸಿ ಯಲ್ಲಿ ಹೆಚ್ಚು ಅಂಕ ಪಡೆದವರಿಂದ ಅರ್ಜಿ ಸ್ವೀಕರಿಸಿ. ತಾಲೂಕಿಗೆ ಲಭ್ಯ ಇರುವ ಲ್ಯಾಪ್‌ಟಾಪ್‌ಗೆ ಅನುಗುಣವಾಗಿ ಅತೀ ಹೆಚ್ಚು ಅಂಕ ಪಡೆದ ಅರ್ಹ ವಿದ್ಯಾರ್ಥಿಗಳನ್ನು ಜಿಲ್ಲಾ ಮಟ್ಟದಲ್ಲಿ ಆಯ್ಕೆ ಮಾಡಿ, ಅರ್ಹ ವಿದ್ಯಾರ್ಥಿಗಳ ಹೆಸರನ್ನು ಘೋಷಿಸಿ ಅವರಿಗೆ ಲ್ಯಾಪ್‌ಟಾಪ್ ಸ್ವೀಕರಿಸುವಂತೆ ಸೂಚನೆ ನೀಡಲಾಗುತ್ತದೆ.

ಸೂಚನೆಯಂತೆ ಪ್ರಸ್ತುತ ವರ್ಷ 2023 ರಲ್ಲಿ ಎಸ್ಸೆಸ್ಸೆಲ್ಸಿ ಯಲ್ಲಿ ಹೆಚ್ಚು ಅಂಕ ಪಡೆದ ಕೂಡ್ಲಿಗಿ – ಕೊಟ್ಟೂರು ತಾಲೂಕು ಸೇರಿ 18 ಕಾರ್ಮಿಕರ ಮಕ್ಕಳು ಆಯ್ಕೆಯಾಗಿದ್ದಾರೆ. ಇವರು ಲ್ಯಾಪ್‌ಟಾಪ್ ಕೇಳಿದರೆ 3 ರಿಂದ 4 ಸಾವಿರ ರೂ. ಶುಲ್ಕ ಕಟ್ಟಿ ಲ್ಯಾಪ್‌ಟಾಪ್ ಸ್ವೀಕರಿಸಿ ಎಂಬುದು ಕೊಟ್ಟೂರು ತಾಲೂಕಿನ ಕಾರ್ಮಿಕ ಇಲಾಖೆ ಕಚೇರಿ ಅಧಿಕಾರಿಗಳ ಸೂಚನೆ ಎಂಬುದು ಕಾರ್ಮಿಕರ ಆರೋಪ.

ಅರ್ಹ ಫಲಾನುಭವಿ ಪ್ರಶ್ನಿಸಿದರೆ ಅಥವಾ ಇನಾಮು ಕೊಡಲು ಒಪ್ಪದಿದ್ದರೆ ಅವರಿಗೆ ಜಿಲ್ಲಾ ಕೇಂದ್ರದ ಕಚೇರಿಗೆ ಅಲೆದಾಟ ತಪ್ಪಿದ್ದಲ್ಲ. ಜೊತೆಗೆ ಹೊರಗಡೆ ಬಹಿರಂಗ ಪಡಿಸಿದರೆ ಕಾರ್ಮಿಕರ ಕಾರ್ಡನ್ನೇ ರದ್ದುಗೊಳಿಸುವ ಬೆದರಿಕೆ ಬೇರೆ. ಇದಕ್ಕೆ ಹೆದರಿ ಅನಿವಾರ್ಯವಾಗಿ 3 ಅಥವಾ 4 ಸಾವಿರ ರೂ.ಕೊಟ್ಟು ಕಾರ್ಮಿಕರು ಲ್ಯಾಪ್‌ಟಾಪ್ ಸ್ವೀಕರಿಸಿದ್ದಾರೆ ಎಂಬ ಮಾತುಗಳು ದಟ್ಟವಾಗಿವೆ. ಸಂಬಂಧ ಪಟ್ಟ ಇಲಾಖೆಯ ಅಧಿಕಾರಿಗಳು ಮತ್ತು ಜನ ಪ್ರತಿನಿಧಿಗಳು ಈ ಬಗ್ಗೆ ಗಮನಹರಿಸಿ, ಸರ್ಕಾರವು ಕಾರ್ಮಿಕರಿಗೆ ಹಾಗೂ ಕಾರ್ಮಿಕರರ ಮಕ್ಕಳಿಗೆ ಶೈಕ್ಷಣಿಕ ಹಾಗೂ ಇತರೆ ಪ್ರಗತಿಯ ಹಿತದೃಷ್ಟಿಯಿಂದ ನೀಡುವ ವಿವಿಧ ಸೌಲಭ್ಯಗಳು ಸರಿಯಾಗಿ ತಲುಪಲು ಇಲಾಖೆಯ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಬೇಕೆಂದು ಕಾರ್ಮಿಕರ

> ಕಾರ್ಮಿಕರಿಂದ ಲಂಚ ಪಡೆದ ಆರೋಪದ ಬಗ್ಗೆ ಪರಿಶೀಲನೆ ಕೈಗೊಳ್ಳುವೆ, ಸರ್ಕಾರ ಕಾರ್ಮಿಕರ ಪ್ರಗತಿಗೆ ನೀಡಿರುವ ವಿವಿಧ ಸೌಲಭ್ಯಗಳನ್ನು ತಾಲೂಕು ಅಧಿಕಾರಿಗಳಾಗಲಿ ಅಥವಾ ಗುತ್ತಿಗೆದಾರರ ಡಿಒ ಗಳಾಗಲಿ ದುರುಪಯೋಗ ಪಡಿಸಿಕೊಂಡಿದ್ದು ಖಚಿತವಾದರೆ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ, ಡಿಒ ಗಳು ಸ್ವೀಕರಿಸಿದ್ದರೆ ಅವರ ಗುತ್ತಿಗೆದಾರರಿಗೆ ಸೂಚನೆ ನೀಡಿ ಅವರನ್ನು ವಜಗೊಳ್ಳಿಸುತ್ತೇವೆ.
>
> – **ಸೂರಪ್ಪ ಡೊಂಬರ ಮತ್ತೂರ್**
> ಲೇಬರ್ ಆಫೀಸರ್ ಹೊಸಪೇಟೆ.

> ಕೇವಲ ಲ್ಯಾಪ್‌ಟಾಪ್ ವಿಷಯ ಮಾತ್ರವಲ್ಲ ಕಾರ್ಮಿಕ ಇಲಾಖೆಯ ಯಾವುದೇ ಸೌಲಭ್ಯಗಳನ್ನು ಪಡೆಯಬೇಕಾದ್ರೆ, ಕಾರ್ಮಿಕರು ಕಚೇರಿಯಲ್ಲಿ ಲಂಚ ಕೊಟ್ರ ಸೌಲಭ್ಯ. ಇಲ್ಲದಿದ್ದರೆ ಅರ್ಜಿಗಳೇ ರಿಜೆಕ್ಟ್. ಕೇಳಿದರೆ ಹತ್ತಾರು ತಪ್ಪಿನ ಕಾರಣ, ದುಡ್ಡು ಕೊಟ್ರೆ ಎಷ್ಟೇ ತಪ್ಪಿದ್ರು ಸೌಲಭ್ಯ ಓಕೆ. ಮದುವೆ ಅನುದಾನ ಪಡೆಯಲಂತು 5 ರಿಂದ 10 ಸಾವಿರ ಕೊಟ್ರ, ಅಕೌಂಟ್‌ಗೆ ಬೇಗ ದುಡ್ಡು, ಇಲ್ಲದಿದ್ರೆ ಅಡ್ಡಾಡಿ ಕಾಲಾಗಿನ ಚಪ್ಪಲಿ ಸವಿತಾವೆ. ಇದು ಇಲ್ಲಿಗೆ ಮಾತ್ರ ಸೀಮಿತವಲ್ಲ, ಈ ಚೈನ್ ಲಿಂಕ್ ಜಿಲ್ಲಾ ಮಟ್ಟದ ಅಧಿಕಾರಿಗಳ ವರೆಗೂ ಇದೆ ವ್ಯವಸ್ಥೆ.
>
> – **ಹೆಸರು ಹೇಳಲಿಚ್ಛಿಸದ ಕಟ್ಟಡ ಕಾರ್ಮಿಕ.** ಕೊಟ್ಟೂರು.

## ಮೈಕ್ರೋ ನ್ಯೂಸ್

### ಡಿ.13 ರಂದು ಜಿಲ್ಲಾ ಮಟ್ಟದ ಸಿರಿಧಾನ್ಯ ಪಾಕ ಸ್ಪರ್ಧೆ



**ಹಂಪಿ ಟೈಮ್ಸ್ ಹೊಸಪೇಟೆ**

ಕೃಷಿ ಇಲಾಖೆಯಿಂದ ಅಂತರರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳ–2024ರ ಅಂಗವಾಗಿ ಜಿಲ್ಲಾ ಮಟ್ಟದ ಸಿರಿಧಾನ್ಯ ಪಾಕ ಸ್ಪರ್ಧೆಯನ್ನು ಡಿ.13ರಂದು ನಗರದ ಹರಿಹರ ರಸ್ತೆಯ ವಿಜಯನಗರ ನ್ಯಾಷನಲ್ ಕಾಲೇಜು ಹಿಂಭಾಗದಲ್ಲಿರುವ ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ ಆಯೋಜಿಸಲಾಗಿದೆ.

ಬೆಂಗಳೂರಿನಲ್ಲಿ ನಡೆಯುವ ರಾಜ್ಯ ಮಟ್ಟದ ಸಿರಿಧಾನ್ಯ ಪಾಕ ಸ್ಪರ್ಧೆಯಲ್ಲಿ ವಿಜಯನಗರ ಜಿಲ್ಲೆಯಿಂದ ಸ್ಪರ್ಧಿಗಳನ್ನು ಆಯ್ಕೆ ಮಾಡಬೇಕಾಗಿದ್ದು, ಈ ಹಿನ್ನೆಲೆಯಲ್ಲಿ ಏರ್ಪಡಿಸಲಾದ ಡಿ.13ರ ಜಿಲ್ಲಾ ಮಟ್ಟದ "ಸಿರಿಧಾನ್ಯ ಪಾಕಸ್ಪರ್ಧೆ"ಯಲ್ಲಿ ಜಿಲ್ಲೆಯ ಎಲ್ಲಾ ಸಾರ್ವಜನಿಕರು ಭಾಗವಹಿಸಲು ಅವಕಾಶವಿರುತ್ತದೆ.

ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಪ್ರತಿ ಸ್ಪರ್ಧಿಗೆ ಒಂದೇ ತಿನಿಸುಗಳಿಗೆ (ಅಡುಗೆ) ಸಿಹಿ ಅಥವಾ ಖಾರ ಮಾಡಲು ಅವಕಾಶವಿರುತ್ತದೆ. ಸಿರಿಧಾನ್ಯ ಸಸ್ಯಹಾರಿ ತಿನಿಸುಗಳಿಗೆ ಮಾತ್ರ ಅವಕಾಶವಿದ್ದು, ಮನೆಯಲ್ಲಿಯೇ ತಯಾರಿಸಿದ ಸಿರಿಧಾನ್ಯ ತಿನಿಸು ಸ್ಪರ್ಧೆಯಲ್ಲಿ ಪ್ರದರ್ಶಿಸಬೇಕು. ತೀರ್ಪುಗಾರರ ನಿರ್ಧಾರವೇ ಅಂತಿಮವಾಗಿರುತ್ತದೆ. ತಯಾರಿಸಿದ ತಿನಿಸುಗಳ ಪ್ರದರ್ಶನ, ಬಳಸಿದ ಸಾಮಗ್ರಿಗಳು, ತೊರಿ–ಕೆ, ರುಚಿ, ಸುವಾಸನೆ, ಪೌಷ್ಟಿಕತೆಗಳ ಮೇಲೆ ಅಂತಿಮ ತೀರ್ಪು ಕೈಗೊಳ್ಳಲಾಗುವುದು. ಜಿಲ್ಲಾ ಮಟ್ಟದಲ್ಲಿ ಅತ್ಯುತ್ತಮ ಒಂದು ಸಿಹಿ ಹಾಗೂ ಖಾರ ತಿನಿಸನ್ನು ಆಯ್ಕೆ ಮಾಡಲಾಗುವುದು. ಜಿಲ್ಲಾ ಮಟ್ಟಕ್ಕೆ ಪ್ರಥಮ ಬಹುಮಾನವಾಗಿ ಖಾರ ತಿನಿಸು ಅಥವಾ ಸಿಹಿ ತಿನಿಸಿಗೆ ತಲಾ ರೂ. 5000 ಬಹುಮಾನವಿರುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕ ಶರಣಪ್ಪ ಮುದಗಲ್ ತಿಳಿಸಿದ್ದಾರೆ.

### ಡಿ.13 ರಂದು ಪಿಂಚಣಿ ಅದಾಲತ್

**ಹಂಪಿ ಟೈಮ್ಸ್ ಬಳ್ಳಾರಿ**

ಕಾರ್ಮಿಕರ ಭವಿಷ್ಯನಿಧಿ ಸಂಘಟನೆಯಿಂದ ಪಿಂಚಣಿದಾರರ ಕುಂದುಕೊರತೆಗಳನ್ನು ನಿವಾರಿಸಲು ಡಿಸೆಂಬರ್ 13 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಬಳ್ಳಾರಿ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಏರ್ಪಡಿಸಲಾಗಿದೆ.

ಬಳ್ಳಾರಿ, ಕೊಪ್ಪಳ, ವಿಜಯನಗರ ಮತ್ತು ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದುಕೊರತೆಗಳನ್ನು ಬಳ್ಳಾರಿಯ ಪ್ರಾದೇಶಿಕ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿ, ಇವರಿಗೆ ಪತ್ರ ಅಥವಾ ಇ–ಮೇಲ್ ಮೂಲಕ ತಮ್ಮ ಪಿ.ಪಿ.ಒ ಸಂಖ್ಯೆ ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ, ಕುಂದು ಕೊರತೆಯ ಸ್ವರೂಪ ಇತ್ಯಾದಿಗಳನ್ನು ಪತ್ರ ಮೂಲಕ ಬರೆದು ಡಿಸೆಂಬರ್ 10 ರೊಳಗೆ ಕಳುಹಿಸಬೇಕು. ಪತ್ರ, ಲಕೋಟೆಯ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು.

## ಅತಿಥಿ ಶಿಕ್ಷಕ ಹುದ್ದೆಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಹಿರೇಸಿಂದೋಗಿಯ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ (ಸಿ.ಬಿ.ಎಸ್.ಇ. ಪಠ್ಯಕ್ರಮ)ಯಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಖಾಲಿ ಇರುವ ಹಿಂದಿ, ಗಣಿತ, ಸಮಾಜ ವಿಜ್ಞಾನ ಮತ್ತು ಗಣಕಯಂತ್ರ ವಿಜ್ಞಾನ ವಿಷಯಗಳ ಶಿಕ್ಷಕರ ಹುದ್ದೆಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಡಿಸೆಂಬರ್ 12 ಕೊನೆಯ ದಿನವಾಗಿದೆ. ಆಸಕ್ತರು ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ, ಹಿರೇಸಿಂದೋಗಿ, ಜಿ॥ ಕೊಪ್ಪಳ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೊಡ್ಡಪ್ಪ ವಾಲ್ಮೀಕಿ, ಪ್ರಾಂಶುಪಾಲರು: 8747092789, ಪಿ.ಜೀವನ್‌ರಾವ್, ಪ್ರ.ದ.ಸ:6362595974 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.

## ಕನಿಷ್ಠ ಬೆಂಬಲ ಬೆಲೆದಡಿ ಭತ್ತ, ರಾಗಿ, ಜೋಳ ಖರೀದಿ ಆರಂಭ


■ **ಹಂಪಿ ಟೈಮ್ಸ್ ಕೊಪ್ಪಳ**

2023–24ನೇ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಭತ್ತ, ರಾಗಿ ಮತ್ತು ಜೋಳ ಖರೀದಿಗೆ ಕೊಪ್ಪಳ, ಗಂಗಾವತಿ, ಕಾರಟಗಿ, ಕನಕಗಿರಿ, ಯಲಬುರ್ಗಾ, ಕುಕನೂರು ಮತ್ತು ಕುಷ್ಟಗಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. ಮುಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ(ಸಾಮಾನ್ಯ)–ರೂ.2183, ಭತ್ತ(ಗ್ರೇಡ್–ಎ)–ರೂ.2203, ಬಿಳಿಜೋಳ(ಹೈಬ್ರಿಡ್)–ರೂ.3180, ಬಿಳಿಜೋಳ(ಮಾಲ್ದಂಡಿ)–ರೂ.3225, ರಾಗಿ–ರೂ.3846 ಗಳ ಕನಿಷ್ಠ ಬೆಂಬಲ ಬೆಲೆಯನ್ನು ಸರ್ಕಾರ ನಿಗದಿಪಡಿಸಿದೆ.

ಕೊಪ್ಪಳ ಎಪಿಎಂಸಿಯಲ್ಲಿ ಭತ್ತ ಮತ್ತು ಜೋಳ ಖರೀದಿ ಅಧಿಕಾರಿಗಳನ್ನಾಗಿ ಸಗಟು ಮಳಿಗೆ ನಿರ್ವಾಹಕರಾದ ಎಂ.ವಿ.ಕೋನಾಪುರ ಮೊ.ಸಂ: 9739228720, ಗಂಗಾವತಿ ಎಪಿಎಂಸಿಯಲ್ಲಿ ಭತ್ತ ಖರೀದಿ ಅಧಿಕಾರಿಯನ್ನಾಗಿ ಆಹಾರ ನಿರೀಕ್ಷಕರಾದ ಶೇಖರಪ್ಪ ಮೊ.ಸಂ: 9980226881, ಕಾರಟಗಿ ಎಪಿಎಂಸಿಯಲ್ಲಿ ಭತ್ತ ಖರೀದಿಗಾಗಿ ಆಹಾರ ನಿರೀಕ್ಷಕರಾದ ನವೀನ್ ಮಠದ್ ಮೊ.ಸಂ: 8123453419, ಕನಕಗಿರಿ ಎಪಿಎಂಸಿಯಲ್ಲಿ ಜೋಳ ಖರೀದಿ ಅಧಿಕಾರಿಯನ್ನಾಗಿ ಪ್ರಭಾರಿ ಆಹಾರ ನಿರೀಕ್ಷಕರಾದ ನವೀನ್ ಮಠದ್ ಮೊ.ಸಂ: 8123453419, ಯಲಬುರ್ಗಾ, ಕುಕನೂರು ಎಪಿಎಂಸಿಯಲ್ಲಿ ಜೋಳ ಖರೀದಿ ಅಧಿಕಾರಿಯನ್ನಾಗಿ ಸಗಟು ಮಳಿಗೆ ನಿರ್ವಾಹಕರಾದ ಎಂ.ವಿ.ಕೋನಾಪುರ ಮೊ.ಸಂ. 9739228720 ಹಾಗೂ ಕುಷ್ಟಗಿ ಎಪಿಎಂಸಿಯಲ್ಲಿ ಜೋಳ ಖರೀದಿಗಾಗಿ ಸಗಟು ಮಳಿಗೆ ನಿರ್ವಾಹಕರಾದ ಸೋಮಶೇಖರ ಮೊ.ಸಂ: 6361289585 ಅವರನ್ನು ನಿಯೋಜಿಸಲಾಗಿದೆ.

ಮುಂಗಾರು ಭತ್ತ ಮತ್ತು ಜೋಳ ಖರೀದಿಗೆ ಸಂಬಂಧಿಸಿದಂತೆ, ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮ ನಿಯಮಿತ ಇವರನ್ನು ಕೊಪ್ಪಳ ಜಿಲ್ಲೆಗೆ ಖರೀದಿ ಏಜೆನ್ಸಿಯನ್ನಾಗಿ ನೇಮಕ ಮಾಡಲಾಗಿರುತ್ತದೆ. ರೈತರಿಂದ ಭತ್ತ ಖರೀದಿಗೆ ದಿನಾಂಕ:15–11–2023 ರಿಂದ 31–12–2023 ಹಾಗೂ ಜೋಳ ಖರೀದಿಗೆ 01–12–2023 ರಿಂದ ಸಂಬಂಧಿಸಿದ ಖರೀದಿ ಕೇಂದ್ರಗಳಲ್ಲಿ ಖರೀದಿ ಪ್ರಕ್ರಿಯೆ ಪ್ರಾರಂಭಿಸಲಾಗಿರುತ್ತದೆ. ರೈತರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

## ಹಲ್ಲೆ ಮಾಡಿದ ಪೊಲೀಸರನ್ನು ಬಂಧಿಸಿ ಪೊಲೀಸರ ನಡೆಗೆ ವಕೀಲರ ಆಕ್ರೋಶ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಚಿಕ್ಕಮಗಳೂರನಲ್ಲಿ ನಡೆದ ಯುವ ವಕೀಲನ ಮೇಲೆ ಹಲ್ಲೆ ಮಾಡಿದ ಪೊಲೀಸರನ್ನು ಬಂಧಿಸಿ ಹಾಗೂ ಚಿಕ್ಕಮಗಳೂರು ವಕೀಲರ ಸಂಘದ ಅಧ್ಯಕ್ಷ ಸೇರಿದಂತೆ ಇತರೆ 15 ಜನ ವಕೀಲರ ವಿರುದ್ಧ ಸುಳ್ಳು ಕೇಸ್ ದಾಖಲಿಸಿರುವುದನ್ನು ಹಿಂಪಡೆಯ ಬೇಕು ಎಂದು ಒತ್ತಾಯಿಸಿ ತಾಲೂಕು ವಕೀಲರ ಸಂಘದ ಪದಾಧಿಕಾರಿಗಳು ಮಂಗಳವಾರ ಪ್ರತಿಭಟನೆ ಮಾಡಿ ತಹಸೀಲ್ದಾರ್ ಮೂಲಕ ಮುಖ್ಯಮಂತ್ರಿ ಮನವಿ ಪತ್ರ ಸಲ್ಲಿಸಿದರು. ಈ ಸಂಧರ್ಭದಲ್ಲಿ ವಕೀಲರ ಸಂಘದ ತಾಲೂಕು ಅಧ್ಯಕ್ಷ ಜಿ.ಎಂ. ಮಲ್ಲಿಕಾರ್ಜುನಯ್ಯ ಮಾತನಾಡಿ, ನವೆಂಬರ್ 30 ರಂದು ಚಿಕ್ಕಮಗಳೂರು ಪಟ್ಟಣದ ಯುವ ವಕೀಲ ಪ್ರೀತಮ್ ಮೇಲೆ ಅಲ್ಲಿನ ಪೊಲೀಸ್ ಅಧಿಕಾರಿಗಳು ಮಾನವೀಯವಾಗಿ ವರ್ತಿಸಿ, ಮೃಗಗಳ ರೀತಿ ಹಲ್ಲೆ ಮಾಡಿ, ಅವರಿಗೆ ತೀವ್ರ ಗಾಯಗಳನ್ನು ಮಾಡಿರುವುದು ವಕೀಲರ ಸಂಘ ತೀವ್ರವಾಗಿ ಖಂಡಿಸುತ್ತದೆ.

> ಪ್ರಶ್ನಿಸಿದವರ ವಿರುದ್ಧ ಸಂವಿಧಾನಿಕ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಸುಳ್ಳು ಪ್ರಕರಣ ದಾಖಲಿಸುವ ಮೂಲಕ ಬೆದರಿಕೆ ಹಾಕ್ತಾರೆ ಎಂದ ವಕೀಲರು

ಚಿಕ್ಕಮಗಳೂರು ವಕೀಲರ ಸಂಘದ ಅಧ್ಯಕ್ಷ ಸೇರಿದಂತೆ ಒಟ್ಟು 15 ಜನ ವಕೀಲರ ವಿರುದ್ಧ ಕಾನೂನು ಬಾಹಿರವಾಗಿ, ಕಾನೂನು ದುರುಪಯೋಗ ಪಡಿಸಿಕೊಂಡು ಎಫ್‌ಐಆರ್ ದಾಖಲಿಸಿಕೊಂಡು ಪೊಲೀಸರು ನಿರಂಕುಶ ಅಧಿಕಾರ ಬಳಕೆ ಮಾಡಿದ್ದು, ಇದನ್ನ ಪ್ರಶ್ನಿಸಿದರೆ ಅವರ ವಿರುದ್ಧ ಸಂವಿಧಾನಿಕ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಸುಳ್ಳು ಪ್ರಕರಣ ದಾಖಲಿಸುವ ಮೂಲಕ ಬೆದರಿಕೆ ಹಾಕಿದ್ದಾರೆ. ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳ ಮತ್ತು ಸ್ವತಂತ್ರದ ಹಕ್ಕುಗಳು ಪೋಲಿಸರಿಂದ ಅವನತಿಯ ಹಂತ ತಲುಪಿದೆ ಎಂದರು.

ಪೋಲಿಸ್ ಮೇಲಾಧಿಕಾರಿಗಳು ಕಾನೂನು ಬದ್ಧವಾಗಿ ಕಾರ್ಯ ನಿರ್ವಹಿಸದೇ, ಪೋಲಿಸರ ಕುಟುಂಬದ ಮತ್ತು ಅವರ ಸಮುದಾಯದ ಪರವಾಗಿ ನಿರಂಕುಶವಾಗಿ ಕಾರ್ಯ ನಿರ್ವಹಿಸಿದೆ. ಪೋಲಿಸರ ದೌರ್ಜನ್ಯ ಹಾಗೂ ಅಧಿಕಾರ ದುರುಪಯೋಗದ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ವಕೀಲರ ಸಂರಕ್ಷಣಾ ಕಾಯ್ದೆಯನ್ನು ಈ ಕೂಡಲೇ ಜಾರಿಗೆ ತರಬೇಕೆಂದು ಒತ್ತಾಯಿಸಿದರು.

ತಹಸೀಲ್ದಾರ್ ಎಂ. ರೇಣುಕಾ ಮನವಿ ಪತ್ರ ಸ್ವೀಕಾರ ಮಾಡಿದರು. ವಕೀಲರ ಸಂಘದ ಉಪಾಧ್ಯಕ್ಷ ಎಚ್. ವೆಂಕಟೇಶ, ಕಾರ್ಯದರ್ಶಿ ಡಿ.ಕೆ.ಬಿ.ರಾಜು,ವಕೀಲರಾದ ಎಚ್.ಎಂ.ಪಂಡಿತರಾಧ್ಯ, ಎಚ್.ಹೊನ್ನೂರಪ್ಪ, ಎಚ್.ಸಿದ್ದಲಿಂಗಪ್ಪ, ಸಿ.ವಿರುಪಾಕ್ಷಪ್ಪ, ರಮೇಶ, ಎಲ್. ಎಸ್.ಬಷೀರ್ ಅಹಮ್ಮದ್, ಅಂಗಡಿ ರವಿ, ವೀರೇಶ್ ಪಾಟೀಲ, ಪ್ರಭು, ಎಚ್.ನಾಗರಾಜ, ನಾರಪ್ಪ, ಪರುಸಪ್ಪ,ಕೆ. ಎಚ್.ಎಂ.ಶೈಲಜಾ, ಸಾವಿತ್ರಬಾಯಿ, ಮಲ್ಲಿಕಾರ್ಜುನ ಸೇರಿದಂತೆ ಅನೇಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.




## ವಚನ ಅರಿವು

### ಸತಿಪತಿ

**ಉಭಯದೃಷ್ಟಿ ಏಕದೃಷ್ಟಿಯಲ್ಲಿ ಕಾಬಂತೆ**
**ದಂಪತಿ ಏಕಭಾವವಾಗಿ ನಿಂದಲ್ಲಿ,**
**ಗುಹೇಶ್ವರಲಿಂಗಕ್ಕೆ ಅರ್ಪಿತವಾಯಿತ್ತು, ಸಂಗನ ಬಸವಣ್ಣ.**
**– ಅಲ್ಲಮಪ್ರಭು**

ಎರಡು ಕಣ್ಣುಗಳಿದ್ದರೂ ನೋಡುವ ನೋಟ ಒಂದೇ ಆಗಿರುತ್ತದೆ. ಹಾಗೇಯೇ ಗಂಡ–ಹೆಂಡತಿ ಒಂದೇ ನೋಟದಂತೆ ಇದ್ದು, ಇಬ್ಬರು ಒಬ್ಬರನೊಬ್ಬರು ಸರಿಯಾಗಿ ಅರ್ಥಮಾಡಿಕೊಂಡು ಇಬ್ಬರು ಸರಿದಾರಿಯಲ್ಲಿ ನಡೆದು, ಗಂಡ–ಹೆಂಡತಿ ಒಬ್ಬರಿಗೊಬ್ಬರು ಒಂದೇ ಭಾವನೆಯಿಂದ ಆಲೋಚಿಸಿ ನಿಷ್ಠೆಯಿಂದ ಬದುಕಿದರೇ ಅವರ ಜೀವನ ಗುಹೇಶ್ವರನಿಗೆ ಅರ್ಪಣೆಯಾಗುತ್ತದೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್‌ನಲ್ಲಿ ತರಬೇತಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಬಳ್ಳಾರಿ

ಕಲಬುರಗಿಯ ಕರ್ನಾಟಕ ಇನ್‌ಸ್ಟಿಟ್ಯೂಟ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ಸಂಸ್ಥೆಯಲ್ಲಿ ತರಬೇತಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಈ ಸಂಸ್ಥೆಯ ಮೂಲಕ ಸಹಕಾರ ಸಂಘ ಸಂಸ್ಥೆ, ಸಹಕಾರ ಇಲಾಖೆ, ಸಹಕಾರ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಹಾಗೂ ಖಾಸಗಿ ಅಭ್ಯರ್ಥಿಗಳಿಗೆ 6 ತಿಂಗಳು/180 ದಿನಗಳ ಅವಧಿಯ ಡಿಪ್ಲೋಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿಯನ್ನು ನೀಡಲಾಗುತ್ತಿದ್ದು, 2024ರ ಜನವರಿಯಿಂದ ಪ್ರಾರಂಭವಾಗಲಿವೆ. ತರಬೇತಿ ಪಡೆಯಲಿಚ್ಛಿಸುವ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ತರಬೇತಿ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸಹಕಾರ ಸಂಘ, ಸಹಕಾರ ಇಲಾಖೆ, ಸಹಕಾರ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ವೇತನ ಪಡೆಯುವ ನೌಕರರಾಗಿರಬೇಕು. ಖಾಸಗಿ ಅಭ್ಯರ್ಥಿಗಳಿಗೆ ನಿಯಮಿತವಾಗಿ ಅವಕಾಶವನ್ನು ಕಲ್ಪಿಸಲಾಗಿದೆ. ವಯೋಮಿತಿ 16 ವರ್ಷ ದಾಟಿದವರಾಗಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಶೇ.18 ರಷ್ಟು ಸ್ಥಾನಗಳನ್ನು ತರಬೇತಿಗಾಗಿ ಮೀಸಲಿರಿಸಲಾಗಿರುತ್ತದೆ. ಕನಿಷ್ಟ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರಿಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ, ಸಹಕಾರಿ ಸಂಘಗಳಲ್ಲಿ ಒಂದು ವರ್ಷಕ್ಕಿಂತ ಮೇಲ್ಪಟ್ಟು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯೂ ಸಹ ತರಬೇತಿ ಪಡೆಯಲು ಅರ್ಹರಾಗಿರುತ್ತಾರೆ. ಈ ತರಬೇತಿಯಲ್ಲಿ ಅಭ್ಯರ್ಥಿಗಳಿಗೆ ಮಾಹೆಯಾನ ರೂ.500 ಶಿಷ್ಯವೇತನ ನೀಡಲಾಗುವುದು. ನಿರುದ್ಯೋಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ "6 ತಿಂಗಳು/180 ದಿನಗಳ ವಿಶೇಷ "ಡಿಪ್ಲೋಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್" ತರಬೇತಿಯನ್ನು ಸಹ ನೀಡಲಾಗುವುದು. ಈ ವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಪಟ್ಟಿಯನ್ನು ಆಯಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರವರ ಮೂಲಕ ಅಥವಾ ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳ ಮೂಲಕ ಅರ್ಜಿ ಸಲ್ಲಿಸಬಹುದು.

ಅಭ್ಯರ್ಥಿಗಳು ಕನಿಷ್ಠ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ವಯೋಮಿತಿ 16 ವರ್ಷಗಳಾಗಿರಬೇಕು. ಗರಿಷ್ಠ 30 ವರ್ಷಗಳು ಮೀರಿರಬಾರದು. ಈ ಅಭ್ಯರ್ಥಿಗಳಿಗೆ ಮಾಹೆಯಾನ ರೂ.600 ಶಿಷ್ಯವೇತನ ನೀಡಲಾಗುವುದು. **ಅರ್ಜಿ ಪಡೆಯುವ ಮತ್ತು ಕಳುಹಿಸುವ ವಿಳಾಸ:** ಪ್ರಾಂಶುಪಾಲರು,ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಆದರ್ಶನಗರ, ಪ್ರಗತಿ ಕಾಲೋನಿ, ಸೇಡಂ. ರಸ್ತೆ, ಕಲಬುರಗಿ–585105. ದೂ.08472–245340, ಮೊ.9916726886, ಮೊ.9742307153, ಮೊ.9113916753.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com

**ವಿದ್ಯಾವಂತ ವೇಶ್ಯೆಯ ಆತ್ಮಕಥೆ ಶ್ರೀಮತಿ ಮಾನದಾದೇವಿ ಪ್ರಣಿತ ಅವರೇ ಬರೆದ ತಮ್ಮದೇ ಆತ್ಮಕಥೆ 1929ರಲ್ಲಿ ಮೊದಲ ಮುದ್ರಣಗೊಂಡಿತು. ಕನ್ನಡಕ್ಕೆ ಅನುವಾದವಾಗಿದ್ದು 2023 ಕ್ಕೆ .ಅಂದರೆ ಬಂಗಾಳಿ ಮೂಲದ ಕಾದಂಬರಿ ಪ್ರಕಟವಾಗಿ 94 ವರ್ಷಗಳೇ ಸಂಧಿವೆ. ಈ ಕಾದಂಬರಿಯ ಒಂದೊಂದು ಪುಟವು ಸ್ವಾತಂತ್ರ್ಯ ಪೂರ್ವದ ಭಾರತ ಮತ್ತು ಸ್ವಾತಂತ್ರ್ಯದ ನಂತರ ಭಾರತದ ಮಹಿಳೆಯರ ಸ್ಥಿತಿಗತಿಗಳನ್ನು ತಾಳೆಹಾಕುತ್ತಾ ಹೋಗುತ್ತದೆ.**

# ವಿದ್ಯಾವಂತ ವೇಶ್ಯೆಯ ಆತ್ಮಕಥೆ ಒಂದು ಒಳನೋಟ...



19ನೇ ಇಸ್ವಿಯಲ್ಲಿ ಕಲ್ಕತ್ತಾದ ಗೌರವಾನ್ವಿತ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಮಾನದಾದೇವಿ, ಈಗಾಗಲೇ ಮದುವೆಯಾದ ರಮೇಶನ ಕುತಂತ್ರಕ್ಕೆ ಬಲಿಯಾಗಿ ಪ್ರೀತಿ ಪ್ರೇಮದ ಮಾಯಾಜಾಲಕ್ಕೆ ಸಿಲುಕಿ ಮನೆ ತೊರೆದ ಘಟನೆಯಿಂದ ಪ್ರಾರಂಭವಾದ ಆಕೆಯ ನರಕಯಾತನೆ, ಅನೇಕ ರಾಜ್ಯಗಳನ್ನು ಪ್ರವೇಶ ಮಾಡಿ, ರಮೇಶನ ಜೊತೆ ಗೌರವಯುತ ಜೀವನಕ್ಕಾಗಿ ಹೋರಾಟ ಮಾಡಿದರೂ, ಆತನ ವಂಚನೆಯ ಪ್ರತಿಫಲದ ನಂತರ ಅಂದಿನ ಕಾಲಘಟ್ಟದ ಯಾವುದೇ ಆಶ್ರಮಗಳಲ್ಲಿ ಆಶ್ರಯ ದೊರಕದೆ ಹೋದದ್ದು, ಮರಳಿ ಮನೆಗೆ ಹೋಗಲಾಗದೆ, ಗೌರವಯುತ ಬದುಕನ್ನು ಬಾಳಲಾಗದೇ, ತನ್ನ ದೇಹವನ್ನೇ ಮಾರಿಕೊಳ್ಳುವ ಸಂದರ್ಭದಲ್ಲಿ ಆಕೆಯೇ ವಿವರಿಸುವ ಹಾಗೆ , ಬಹುತೇಕ ಯುವತಿಯರು ತಮ್ಮ ಸ್ವಂತ ಇಚ್ಛೆಯಿಂದ ತಮ್ಮ ಪ್ರಿಯಕರನ ಜೊತೆಗೆ ಮದುವೆ ಮಾಡಿಕೊಂಡು, ಗೌರವದ ಬದುಕು ಕಟ್ಟಿಕೊಳ್ಳಲು ಹೊರ ಬರುತ್ತಾರೆ. ತಾನು ನಂಬಿದ ವ್ಯಕ್ತಿ ನಡುರಾತ್ರಿಯಲ್ಲಿ ಬಿಟ್ಟು ಹೋದಾಗ ಜೀವನೋಪಾಯಕ್ಕಾಗಿ ನೌಕರಿಯನ್ನೇ ಮಾಡಿ ಸಂಪಾದಿಸಬಹುದು. ಆದರೆ ಬದುಕಿನ ಅಗತ್ಯತೆಗಳಿಗಿಂತ ಆಡಂಬರದ ಜೀವನಶೈಲಿಯ ಕನಸು ಕಾಣುವ ಯುವತಿಯರು, ಆ ಎಲ್ಲಾ ವೈಭೋಗದ ಅನುಭವಕ್ಕಾಗಿ ಐಷಾರಾಮಿ ಜೀವನದ ಕನಸುಕಂಡು, ತಮ್ಮ ಉದ್ಯೋಗದ ನಡುವೆಯೂ "ಅರೆಕಾಲಿಕ" ವೇಶ್ಯಾವೃತ್ತಿ ಮಾಡುತ್ತಾರೆ. ಇದನ್ನು ಸಮಾಜದ ದೃಷ್ಟಿಯಲ್ಲಿ ಅಡ್ಡದಾರಿ ಹಿಡಿದವಳು ಎನ್ನುತ್ತಾರೆ. ಮಾನದಾದೇವಿಯ ಈ ಮಾತು ಪ್ರಸ್ತುತ ಕಾಲಘಟ್ಟಕ್ಕೂ ತಾಳೆ ಹಾಕಿ ನೋಡುವಂತೆ ಮಾಡುತ್ತದೆ.

ಅಷ್ಟೇ ಅಲ್ಲದೆ ಅಂದಿನ ಸ್ವಾತಂತ್ರ್ಯ ಅಸಹಕಾರ ಚಳುವಳಿಯಲ್ಲಿ ಧುಮಿಕಿದ ಈ ಮಹಿಳೆಯರನ್ನು, ಅಂದಿನ ಸ್ವಾತಂತ್ರ್ಯ ಯುವ ಹೋರಾಟಗಾರು ನೆಡೆಸಿಕೊಂಡ ಘಟನೆಗಳನ್ನು ಓದುವಾಗ ಪುನಃ ಇಂದಿನ ನಮ್ಮ ರಾಜಕೀಯ ವ್ಯವಸ್ಥೆಯ ಕೆಲವು ಪರದೆ ಇಂದಿನ ಕಥೆಗಳು ಸಾಕ್ಷಿಯಾಗಿ ನಿಲ್ಲುತ್ತವೆ...

ಈ ಕಥೆಯಲ್ಲಿ ವಿಧವೆಯರು ಈ ವೃತ್ತಿಗೆ ಬರಲು ಅಂದಿನ ಸಾಂಪ್ರದಾಯಿಕ ಕಟ್ಟುಪಾಡುಗಳು ಯಾವ ರೀತಿ ಬಲವಂತವಾಗಿ ಆಕೆಯನ್ನು ವೇಷಾವೃತ್ತಿಯ ಹಾದಿಯಲ್ಲಿ ಸಾಗುವಂತೆ ಮಾಡುತ್ತದೆ ಎಂದು ಓದಿದಾಗ ದಿಗ್ಭ್ರಮೆಯಾಗುತ್ತದೆ . ವಿಧವೆಯರ ಈ ಕರಾಳ ಬದುಕಿಗೆ ಕಾಲಿಡಲು ಈ ದೇಶದ ಮೌಢ್ಯಸಂಪ್ರದಾಯಗಳ ಜೊತೆ ಮುಕ್ತವಾಗಿ ಸಮಾಜವು ಮರುಮದುವೆಗೆ ಅವಕಾಶ ಕಲ್ಪಿಸಿಕೊಡಲಾರದ್ದು, ಅಲ್ಲದೇ ಇವರ ಶೋಚನೀಯ ಸ್ಥಿತಿಗೆ ಒಂದೆಡೆ ಕುಟುಂಬ ಕಾರಣವಾದರೆ, ಇನ್ನೊಂದೆಡೆ ಸಮಾಜವು ಕೂಡ ಈಕೆಯ ಬಲಹೀನತೆಯನ್ನು ದುರುಪಯೋಗಪಡಿಸಿಕೊಂಡು ಬಲವಂತವಾಗಿ ಪಾಪದ ಕೂಪಕ್ಕೆ ತಳ್ಳುವಂತಾಗುತ್ತದೆ. ಹೀಗೆ ಲೇಖಕಿ ತಾನು ಹೇಗೆ ಜಾರಿದೆ ಎನ್ನುವ ವಿಷಯ ಪ್ರಸ್ತುತಪಡಿಸುವಾಗ, ಆಕೆಯ ಈ ಮಾತು ಇಂದಿಗೂ ಪ್ರಸ್ತುತ ಎನಿಸುತ್ತಿದೆ.

ಮುಂದುವರೆದು ಲೇಖಕಿ,

ನಾನು ಮನೆಯನ್ನು ತೊರೆದದ್ದು ಏಕೆ ? ಈ ಪ್ರಶ್ನೆಗೆ ಅತ್ಯಂತ ಸ್ಪಷ್ಟವಾದ ಉತ್ತರವನ್ನು ನೀಡುತ್ತೇನೆ. ವಯೋ ಸಹಜವಾದ ಕಾಮನೆಗಳು ಮತ್ತು ಹಿತ– ಅಹಿತಗಳ ಬಗ್ಗೆ ಯೋಚಿಸುವ ಶಕ್ತಿ ಕಡಿಮೆ ಇದ್ದ ಕಾರಣದಿಂದಾಗಿ, ನಾನು ಮನೆಯನ್ನು ಬಿಟ್ಟು ಹೊರಬಂದಿದ್ದೆ. ಶರೀರಧರ್ಮದ ಸ್ವಾಭಾವಿಕ ನಿಯಮಗಳಿಗೆ ಅನುಗುಣವಾಗಿ ನನ್ನ ದೇಹದಲ್ಲಿಯೂ ಅನೇಕ ರೀತಿಯ ಬದಲಾವಣೆಗಳು ಉಂಟಾಗಿದ್ದವು. ಭಾವನೆಗಳು ಮೂಡ ತೊಡಗಿದ್ದವು ಇಂತಹ ವಯಸ್ಸಿನಲ್ಲಿ ಮನಸ್ಸಿನ ಬಯಕೆಗಳನ್ನು ವಿವಾಹ ಎನ್ನುವ ಸಂಸ್ಕಾರದ ಮೂಲಕ ಶಮನಗೊಳ್ಳುವ ವ್ಯವಸ್ಥೆ ಸಮಾಜದಲ್ಲಿದೆ. ಈ ವಯಸ್ಸಿನ ಹುಡುಗ –ಹುಡುಗಿಯರಿಗೆ ಸೂಕ್ತ ಶಿಕ್ಷಣವನ್ನು ನೀಡುವುದರಿಂದ ಮತ್ತು ಅವರು ಯಾವತ್ತೂ ಒಳ್ಳೆಯ ಜನರ ಜೊತೆಯಲ್ಲಿ ಇರುವ ಹಾಗೆ ನೋಡಿಕೊಳ್ಳುವುದರ ಮೂಲಕ ಚಿತ್ತ ಚಂಚಲವನ್ನು ನಿಯಂತ್ರಿಸಬಹುದು. ಆದರೆ ನಮ್ಮ ಸಮಾಜದಲ್ಲಿ ಈಗ ಶಿಕ್ಷಣ ಮತ್ತು ಸತ್ಸಂಗದ ಅಭಾವ ಎಲ್ಲಾ ಕಡೆ ಕಂಡು ಬರುತ್ತದೆ. ಈ ಕಾರಣದಿಂದಾಗಿ ತಾರುಣ್ಯದಲ್ಲಿ ಹದಿಹರಿಯದವರ ಮನಸ್ಸಲ್ಲಿ ಕಾಮ–ಪ್ರೇಮದ ಬಯಕೆ ಆ ಕಾಲದಲ್ಲಿ ಮೂಡುತ್ತದೆ ನಿಯಂತ್ರಿಸಿಕೊಳ್ಳಲಾಗದ ಹಂತವನ್ನು ತಲುಪಿ ಬಿಡುತ್ತದೆ.

ನನ್ನ ಈ ಅಭಿಪ್ರಾಯಕ್ಕೆ ಸ್ವತಃ ನಾನೇ ಉದಾಹರಣೆ .ನನಗೆ ಬಾಲ್ಯದಲ್ಲಿ ಸುಶಿಕ್ಷಣ ಹಾಗೂ ಸಜ್ಜನರ ಸಂಗ ಸಿಗಲೇ ಇಲ್ಲ ಎಂದರೆ ಅತಿಶೋಯಕ್ತಿಯೇನು ಅಲ್ಲ. ಶಾಲೆಗೆ ಹೋಗಿ ಒಂದಿಷ್ಟು ಓದು ಬರಹ ಕಲಿತಿದ್ದಕ್ಕಾಗಿ, ಕಾವ್ಯ, ಸಣ್ಣ ಕಥೆ ಕಾದಂಬರಿ ಮುಂತಾದವುಗಳನ್ನು ಓದುವ ಅವಕಾಶ ನನಗೆ ದೊರಕಿತು. ಅದರ ಪರಿಣಾಮ ನನ್ನ ಹೃದಯದಲ್ಲಿ ಕಲ್ಪನೆ ಹಾಗೂ ನವಿರಾದ ಭಾವನೆಗಳು ಹೆಚ್ಚಿನ ಸ್ಥಾನವನ್ನು ಆಕ್ರಮಿಸಿಕೊಂಡವು. ವಿಶೇಷವೆಂದರೆ ನಾನು ಬಾಲ್ಯದಲ್ಲಿ ಯಾವುದೇ ಧರ್ಮ ಗ್ರಂಥಗಳನ್ನು, ಪೌರಾಣಿಕ ಕಥೆಗಳನ್ನು ,ನೀತಿ ಬೋಧಕ ಸಾಹಿತ್ಯವನ್ನು ಓದಲಿಲ್ಲ. ಭಾವ ಪ್ರಧಾನ, ಕಲ್ಪನಾ ಪ್ರಧಾನಗಳನ್ನು ಮಾತ್ರ ಓದಿದೆ. ಸಂಯಮದಿಂದ ಕಲಿಸುವ ನೀತಿ ಮಾರ್ಗವನ್ನು ಬೋಧಿಸುವ ಯಾವ ಪುಸ್ತಕಗಳನ್ನು ಯಾರೊಬ್ಬರೂ ನನ್ನ ಕೈಗೆ ನೀಡಲಿಲ್ಲ. ಅವುಗಳು ಓದು ಎಂದು ಯಾರೂ ಹೇಳಲು ಇಲ್ಲ. ಸ್ವತಃ ನನ್ನ ತಂದೆ ಕೂಡ .ನಾನು ಬಾಲ್ಯವನ್ನು ಅನುಭವಿಸಿದ ರೀತಿ ಉತ್ತಮ ಮಟ್ಟದ್ದೇನು ಆಗಿರಲಿಲ್ಲ. ವಿಹಾರಕ್ಕೆ ವಿನೋದಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದ ನಾನು, ಉತ್ತಮ ಮಾರ್ಗದಲ್ಲಿ ಸಾಗಬೇಕು ಎಂದು ಬಯಸುವುದಾದರೂ ಯಾರು ? ನಾಟಕ–ಅಭಿನಯ– ಗಾಯನ ಸಿನಿಮಾ ದೃಶ್ಯಗಳು ನನ್ನ ಮನಸ್ಸಿನಲ್ಲಿ ಸದ್ಭಾವನೆಗಳನ್ನು ಜಾಗೃತಿಗೊಳಿಸಲಿಲ್ಲ. ನಿಜ ಹೇಳುವುದಾದರೆ ಚಿಕ್ಕ ವಯಸ್ಸಿನ ಮಕ್ಕಳ ಮೇಲೆ ಇವುಗಳೆಲ್ಲ ದುಷ್ಪರಿಣಾಮ ಬೀರುವ ಸಾಧ್ಯತೆಗಳೆ ಅಧಿಕ. ಒಂದೋ ಎರಡೋ ಹಲ್ಲುಗಳು ಹುಟ್ಟುತ್ತಿದ್ದಂತೆಯೇ, ಶಿಶುವಿಗೆ ಮೀನನ್ನು ತಿನ್ನುವುದಕ್ಕೆ ಕೊಟ್ಟರೆ ಏನಾಗುತ್ತದೆ? ಅದು ಸಾವಿನ ಕಡೆಗೆ ಪ್ರಯಾಣಿಸುತ್ತದೆ ಅಷ್ಟೇ. ದ್ವಂದ್ವಾರ್ಥದ ಹಾಗೂ ಅಶ್ಲೀಲ ಸಂಭಾಷಣೆಗಳಿರುವ ನಾಟಕಗಳನ್ನು ನೋಡುವುದರಿಂದ, ಇಂತಹದೇ ವಸ್ತುಗಳನ್ನು ಒಳಗೊಂಡಿರುವ ಕಥೆ ಕಾದಂಬರಿಗಳನ್ನು ಓದುವುದರಿಂದ ತರುಣತರಣೀಯರು ತಪ್ಪು ಹಾದಿ ಇಡುವುದು ಅತ್ಯಂತ ಸಹಜ.



**ಶೈಲಜಾ ಹೆಚ್.ಎಂ.**
**ಗಂಗಾವತಿ**

## ಚಿಂತನ ಮಂಥನ

ನನ್ನದೇ ಜೀವನದ ಅನುಭವದಿಂದ ನಾನು ಈ ಮಾತು ಆಡುತ್ತಿದ್ದೇನೆ ಎಂದು ಲೇಖಕಿಯ ಮಾತು ಆಕೆಯ ಪ್ರಮಾಣಿಕತೆಯನ್ನು ಸಾರುತ್ತದೆ. ಪ್ರಸ್ತುತ ಕಾಲದಲ್ಲಿ, ಸಿನಿಮಾಗಳಿಗೆ ಸೆನ್ಸಾರ್ ಇರುವ ಹಾಗೆ , ಸಾಮಾಜಿಕ ಜಾಲತಾಣಗಳಿಗೂ ಹಾಗೂ ಮನೋರಂಜನೆಯ ಟಿವಿ ಶೋಗಳಿಗೂ ಸೆನ್ಸರ್ ಮಾಡುವ ಕುರಿತು ಸರ್ಕಾರಗಳು ಯೋಚಿಸಬೇಕು. ಇಂದು ಚಿಕ್ಕಮಕ್ಕಳ ಕೈಯಲ್ಲೂ ಮೊಬೈಲ್ ಕೊಡುತ್ತೇವೆ. ಅಲ್ಲಿ ಎಗ್ಗಿಲ್ಲದೆ ನುಗ್ಗಿ ಬರುವ ಕೆಲವು ಅಶ್ಲೀಲ ವಿಡಿಯೋಗಳು ಮುಜುಗರ ತರುತ್ತವೆ. ಅಲ್ಲದೇ ಅವು ಮಕ್ಕಳ ಹಾಗೂ ಹರೆಯದ ಯುವಜನತೆಗೆ ಬೇರೆಂದೂ ಲೋಕಕ್ಕೆ ಸೆಳೆಯುವ ಸಾಧ್ಯತೆಗಳು ಇರುವಾಗ ,ನನ್ನ ವಯ್ಯಕ್ತಿಕ ಅಭಿಪ್ರಾಯದಲ್ಲಿ ಸೆನ್ಸಾರ್ ಬಗ್ಗೆ ಸರ್ಕಾರಗಳು ಯೋಚನೆ ಮಾಡುವುದು ಸೂಕ್ತ.....

ಅಬ್ಬಾ ! ಈ ಆತ್ಮಕಥೆ ಬರೆಯುವ ಲೇಖಕಿ ತನ್ನ ಬದುಕಿನ ಕರಾಳ ಕಥೆಯನ್ನು ಹೇಳುವಾಗ ಎಲ್ಲಿಯೂ ಅಶ್ಲೀಲ ಪದಗಳನ್ನೂ ಬಳಸದೇ, ಅಂತಹ ಯಾವುದೇ ಸನ್ನಿವೇಶಗಳನ್ನೂ ವೈಭವೀಕರಿಸದೇ, ವಸ್ತುವಿಷಯಗಳನ್ನು ಅತ್ಯಂತ ಗಾಂಭೀರ್ಯಯುತವಾಗಿ ಕಟ್ಟಿಕೊಟ್ಟದ್ದು ಓದುಗರ ಮನಸೆಳೆಯುತ್ತದೆ. ಈ ಲೇಖಕಿ ಯಾವುದೇ ಅಕಾಡೆಮಿಕ್ ಸ್ಕಾಲರಗಳಿಗೂ ಕಡಿಮೆಯಿಲ್ಲ ಅನ್ನಿಸಿಬಿಡುತ್ತದೆ. ಕನ್ನಡಕ್ಕೆ ಅನುವಾದ ಮಾಡಿದ ಲೇಖಕರಾದ ಡಾ.ನಾಗ .ಎಚ್ .ಹುಬ್ಬಿ ಅವರು ಕೂಡ ಆ ಗಾಂಭೀರ್ಯದ ಚೌಕಟ್ಟನ್ನು ದಾಟದೇ, ಕನ್ನಡಭಾಷಾ ಪ್ರತಿಭೆಯನ್ನು ಶ್ರೀಮಂತವಾಗಿ ಮೆರೆಸಿದ್ದಾರೆ.





ಈ ಪುಸ್ತಕದ ಯಾವ ಘಟನೆಗಳು ಸಮಾಜದ ಅಭ್ಯುದಯಕ್ಕೆ ಮಾರಕವಾಗದೆ, ಪ್ರತಿ ಸನ್ನಿವೇಶಗಳು ಪ್ರಬುದ್ಧ ಮಾರ್ಗದರ್ಶನ ಮಾಡುವಂತಿವೆ. ಮಾನದಾದೇವಿಯಿಂದ –ಫಿರೋಜ್ ಬೀಬಿಯಾಗಿ ಕೊನೆಯಲ್ಲಿ ಮಿಸ್ ಮುಖರ್ಜಿ ಆಗುವವರೆಗಿನ ಪಯಣದಲ್ಲಿ, ಅಲ್ಲಲ್ಲಿ ಲೇಖಕಿ ಬಳಸಿದ ವೇಶ್ಯೆ–ಕುಲಟೆ –ಬೀದಿ ಸೂಳೆ –ಜಾರಣೆ –ಪತಿತೆ ಎನ್ನುವ ಪದಗಳು ಆಧುನಿಕ ಸಮಾಜದ ಕೆನ್ನೆಗೆ ರಪ್ ಎಂದು ಬಾರಿಸುವಂತಿವೆ . ಇಂತಹ ಶಬ್ದಗಳನ್ನು ಓದಲಿಕ್ಕೂ ಆಗದ ನಮ್ಮಂತವರಿಗೆ, ಆ ಮಹಿಳೆಯರು ಆ ನರಕದಲ್ಲಿ ಅನುಭವಿಸಿದ ಯಾತನೆಯನ್ನು ನೆನೆದರೆ ಎದೆ ಝಲ್ ಎನ್ನುತ್ತದೆ.

ಅಲ್ಲದೇ, ಅಂದಿನ ಕಾಲಘಟ್ಟದಲ್ಲಿ ಇಂತಹ ಒಂದು ಆತ್ಮಕಥೆ ಬರೆದು ಮಡಿವಂತಿಕೆ ಸಮಾಜವನ್ನು ಮತ್ತು ಕಾನೂನಿನ ಬೆದರಿಕೆಗಳನ್ನು ಎದುರಿಸಿ, ತನ್ನಂತೆ ಯಾರು ಇಂತಹ ಕತ್ತಲಲೋಕಕ್ಕೆ ಕಾಲಿಡಬಾರದು ಎಂಬ ಆಕೆಯ ಕಾಳಜಿ ಅಭಿನಂದನಾರ್ಹವಾದದ್ದು. " ನನ್ನ ಸ್ಪರ್ಶ ಬಯಸಿ ಬಂದವರು ನೆಡೆದುಕೊಳ್ಳುವ ರೀತಿಯನ್ನು ನೆನಸಿಕೊಂಡರೆ, ನಾನು ನರಕಯಾತನೆ ನೋಡುವುದಕ್ಕೆ ಪರಲೋಕಕ್ಕೆ ಹೋಗಬೇಕಾದ ಅವಶ್ಯಕತೆಯೇ ಇಲ್ಲ ಅನ್ನಿಸುತ್ತದೆ." ಎಂಬ ಲೇಖಕಿ ಹೇಳಿದ ಮಾತು ನನಗೆ ಮಾನಸಿಕವಾಗಿ ವೇದನೆಕೊಟ್ಟಿತು. ಇಂತಹ ಭಯಭೀತ ವಾತಾವರಣಕ್ಕೆ ತಳ್ಳಿದವರಿಗೆ ಏನೆಂದು ಕರಿಯಬೇಕು ಎನ್ನುವ ಪ್ರಶ್ನೆ ಬಾರದೇ ಇರಲಾರದು..? ನಿಸರ್ಗದ ಕರೆಗೆ ಋತುಮತಿಯಾದ ಬಾಲೆಯ ಹದಿಹರೆಯದ ವಯೋಜಹಜ ಕಾಮನೆಗಳು,ಹತೋಟಿಮೀರಿ ಕಾಲು ಜಾರುವ ತರುಣಿಯರಿಗೆ, ಜಾರಣಿ ಎಂದು ಕರೆಯುವುದಾದರೆ, ಹತೋಟಿ ಮೀರಿದ ಪರಿಸರವನು ಬಾಲೆಗೆ ಬಳುವಳಿಯಾಗಿ ಕೊಟ್ಟು, ಸರಿಯಾದ ಸಮಯದಲ್ಲಿ ತಿದ್ದಿ ತೀಡದ ಪೋಷಕ ಹಾಗೂ ಸಭ್ಯವರ್ಗವನ್ನು ಏನೆಂದು ಕರೆಯಬೇಕು ?.

ಪ್ರೀತಿ–ಪ್ರೇಮದ ಸಂಚಿಕೆ ಬಲಿಯಾಗಿ, ವಯೋಮಾನದ ಅಭಿಲಾಷೆಯೇ ಮಹತ್ವವಾಗಿ, ಪ್ರೀತಿಯೇ ತನ್ನ ಬದುಕಿನ ಪರಕಾಷ್ಠೆಯೆಂದು ಪ್ರೀತಿಸಿದವನನು ವರಿಸಿ, ಬದುಕನ್ನು ಕಟ್ಟಿಕೊಳ್ಳಲು ಕನಸು ಕಂಡವಳು, ಆತನ ಕಾಮೋದ್ರೇಕದ ಹಸಿವು ನೀಗಿದ ಮೇಲೆ, ನಡು ರಾತ್ರಿಯಲ್ಲಿ ತೊರೆದುಹೋಗುವ ಯುವಕನ ಪಿತೂರಿಗೆ ಬಲಿಯಾದ ಆಕೆಯನ್ನು, ಪತಿತೆ ಎಂದು ಕರೆಯುವುದಾದರೆ, ಆಕೆಯನ್ನು ಆ ಸ್ಥಿತಿಗೆ ತಂದ ಪುರುಷ ಮೃಗಕ್ಕೆ ಏನೆಂದು ಕರೆಯಬೇಕು? ಸಮಾಜದ ಗಣ್ಯ ವ್ಯಕ್ತಿಗಳ ತೆವಲಿಗೆ ಬಲಿಯಾಗಿ, ಮುಗ್ದೆಯೊಬ್ಬಳು ಆತನ ಮಗುವಿಗೆ ಜನ್ಮವಿತ್ತು, ಮುಂದೊಂದು ದಿನ ನಾಗರಿಕ ಸಮಾಜದ ತುಳಿತಕ್ಕೆ ಒಳಗಾದ ಹೆಣ್ಣು ಗರ್ಭ ಸಂಚಯ, ಸುಶಿಕ್ಷಿತರಿಗೆ ಕುಲುಟೆಯಂತೆ ಕಾಣುವುದಾದರೆ, ಆ ಕುಲಟೆಯ ಜನನಕ್ಕೆ ಕಾರಣವಾದ ಗರ್ಭಸಂಜಾತನಿಗೆ ಏನೆಂದು ಕರೆಯಬೇಕು?

### ಯೌವ್ವನದ ಪಡಸಾಲೆಯಲ್ಲಿರುವ ಗೃಹಿಣಿಯ

ಪತಿ ವಿಯೋಗವಾದರೆ, ಆ ವೈಧ್ಯವ್ಯಕೆ ಶಾಸ್ತ್ರ ಪುರಾಣಗಳ ಬಂಧನಗಳ ಬಿಗಿದು ತನ್ನ ವಿರಹ ವೇದನೆಯನು ದಿನಕ್ಕೊಮ್ಮೆ ಕೊಲ್ಲುವ ಸಂಪ್ರದಾಯಗಳಿಂದ ಬೇಸತ್ತವಳಿಗೆ, ಬದುಕು ನೀಡುವ ಹುಸಿಗನಸ ನೆಚ್ಚಿ, ಪರಪುರುಷನ ಬುಜದ ಆಶ್ರಯಪಡೆದ ವಿಧವೆಯನು ವೇಶ್ಯೆಯೆಂದು ಕರೆಯುವುದಾದರೆ, ವೈಧವ್ಯ ಆಕಸ್ಮಿಕ, ಶಾಪವಲ್ಲವೆಂದು ಅರಿಯದೆ ಆಕೆಯ ಮರುವಿವಾಹವನ್ನು ನಿಷೇಧಿಸಿದ ಈ ಸಮಾಜದ ಸಂಪ್ರದಾಯಗಳಿಗೆ ಏನೆಂದು ಕರೆಯಬೇಕು...?

ಜನನಿಯ ಸ್ತನದಿಂದ ಶಿಶು ಹಾಲನ್ನು ಮಾತ್ರ ಹೀರಿಕೊಳ್ಳುವುದು, ದುಷ್ಟಕಾಮುಕನ ಜೊತೆಗೆ ಸಮಾಜವೂ ಆಕೆಯ ಸ್ತನದಿಂದ ರಕ್ತವನ್ನು ಮಾತ್ರ ಹೀರುವುದನು ಏನೆಂದು ಕರೆಯಬೇಕು ?..... ಒಟ್ಟಾರೆ ಈ ಪುಸ್ತಕದ ಪ್ರತಿ ಅಧ್ಯಾಯವೂ ಇಂದಿನ ಯುವಜನತೆಗೆ ನೀತಿಪಾಠದಂತಿವೆ ಎಂದರೆ ತಪ್ಪಾಗಲಾರದು. ಈ ಪುಸ್ತಕವನ್ನು ಕನ್ನಡಕ್ಕೆ ಅನುವಾದ ಮಾಡಿದ ಡಾ. ನಾಗ ಎಚ್ ಹುಬ್ಬಿಯವರಿಗೂ , ಛಂದ ಪುಸ್ತಕದವರಿಗೂ ಹಾಗೂ ವಿತರಕರಿಗೂ ನನ್ನ ಧನ್ಯವಾದಗಳು.....

**– ಶೈಲಜಾ. ಹೆಚ್. ಎಮ್**
**ಗಂಗಾವತಿ**

## ಕವಿ ಮನಸು

### ಕಿತ್ತೂರ ಚೆನ್ನಮ್ಮ ಜಾನಪದ



ಕಿತ್ತೂರ ಚೆನ್ನಮ್ಮ ರಾಜ್ಯವ ನಾಳಿಯಾಳ
ಮಕ್ಕಳಂತೆ ತಿಳಿದಾಳ ಪ್ರಜೆಗಳನ್ನ.
ಜಾತಿ ಪಂಥವು ಇಲ್ಲ ಗೋತ್ರವು ಬೇರೆ
ಇಲ್ಲನಾವೆಲ್ಲ ಒಂದೇ ಅನ್ನುತ್ತಾಳ......

ಅಮಟೂರ ಬಾಳಪ್ಪ ಸಂಗೊಳ್ಳಿ ರಾಯಣ್ಣ
ಚೆನ್ನಮ್ಮ ಮೆಚ್ಚಿದ ಗಂಡುಗಲಿ.
ಮಾತೃಭೂಮಿಯ ರಕ್ಷಣೆಗಾಗಿ
ಪಣ ತೊಟ್ಟು ನಿಂತಾರೋ
ರಣರಂಗಕ್ಕೆ........

ಡಾಲನ್ನು ಧರಿಶ್ಯಾಳೋ ಕತ್ತಿಯ
ಹಿಡಿದಾಳೋ
ಕುದರಿಯ ಏರಿಯಾಳೋ ರೋಷದಲ್ಲಿ.
ಗುರುದೇವ ನೀ ಕಾಯೇ ಹರ ಹರ
ಮಹಾದೇವ
ಜಯವನ್ನು ನೀಡು ನಮ್ಮ ಪಾಲಿಗೆ......

ಆಂಗ್ಲರು ಮಾಡಿದ ಮೋಸ ಕುತಂತ್ರ
ಧಾರವಾಡ ತ್ಯಾಕ್ರೆಗೆ ಗಡಿಬಿಡಿ
ಬಂದೈತಿ ಸುತ್ತಲೂ ಸೈನ್ಯವೂ ಏರಿ
ರುಂಡವ ತೆಗೆದಾರ ಆ ಕ್ಷಣದಿ,...

ಕೆಲವು ದಿನಗಳಲ್ಲಿ ಕೆರಳಿಕೆಂಡವಾಗಿ
ಹುಟ್ಯಾರದೇಶದ್ರೋಹಿಗಳು ನಮ್ಮೊಳಗೆ.
ಮಲ್ಲಪ್ಪ ಶೆಟ್ಟಿ ಕುಲಕರ್ಣಿ ತಾ ಕೂಡಿ
ಮದ್ದಿಗೆ ಸಗಣಿಯ ಬೆರಿಶ್ಯಾರೋ ....

ಕಹಳೆಯ ಉದ್ಗಾರ ಡಮರನ್ನು ಬಾರಿಶ್ಯಾರ
ರಣರಂಗ ಜೈಂಕಾರ ಆಕಾಶಕ್ಕೆ.
ಸಂಚನ್ನ ರೂಪಿಸಿ ವಂಚನೆಯ ಮಾಡ್ಯಾರ
ಮಹಾರಾಣಿ ಚೆನ್ನಮ್ಮ ಕರತಾಳಕೆ.....

ಬಂದಿಸಿ ಕರೆದೊಯ್ದು ಬೈಲಹೊಂಗಲ
ಶರ ಮನೆಗೆ ಇಟ್ಟಾರೋ ಚೆನ್ನಮ್ಮನ ಎಷ್ಟೋ
ದಿನ.
ಹರ ಹರ ಗುರುದೇವಮಹಾದೇವ ಎನ್ನುತ
ಕಷ್ಟದಿ ಕಳೆದಾಳ ಚನ್ನಮ್ಮ ತಾಯಿ ಕೊನೆ
ಉಸಿರ.....

– **ಎಸ್.ಎಸ್. ಮುದ್ಲಾಪುರ.** ಕೊಪ್ಪಳ

### ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

### ತುಂಗಭದ್ರಾ ನೀರಿನ ಮಟ್ಟ



| ಮಂಗಳವಾರ : 05-12-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1592.97 ಅಡಿ |
| ಒಳ ಹರಿವು | 731 ಕ್ಯುಸೆಕ್ |
| ಹೊರ ಹರಿವು | 1959 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 13.126 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.04 ಅಡಿ |
| ಒಳ ಹರಿವು | 1731 ಕ್ಯುಸೆಕ್ |
| ಹೊರ ಹರಿವು | 5262 ಕ್ಯುಸೆಕ್ |
| ಸಾಮರ್ಥ್ಯ | 90.494 ಟಿಎಂಸಿ |

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

**ತುಸು ಹೆಚ್ಚು ಇರಲಿ ಎಂದು ನೀವು ಆಶಿಸುವುದು ಕಾಮ ವಾದರೆ, ಅದು ಸಿಗದೇ ಹೋದಾಗ ನಿಮಗೆ ಬರುವ ಸಿಟ್ಟು ಕ್ರೋಧ ಅನಿಸುತ್ತದೆ ಇನ್ನೂ ಹೆಚ್ಚು ಬೇಕೆಂಬ ಆಸೆ ಲೋಭ ಎನಿಸಿದರೆ ಹೀಗೆಯೇ ಹೆಚ್ಚು ಉಳಿಯಲಿ ಎಂಬುದು ಮೋಹ ಎನಿಸುತ್ತದೆ. ಹಾಗೆ ನಮ್ಮಲ್ಲಿ ಹೆಚ್ಚಿನ ವಸ್ತುಗಳ ಸಂಗ್ರಹವಾದಾಗ ನಮ್ಮಲ್ಲಿ ಸಹಜವಾಗಿಯೇ ಅಹಂ ಎಂಬ ಮದ ಬರುತ್ತದೆ. ನಮಗಿಂತ ತುಸು ಹೆಚ್ಚು ಬೇರೆಯವರ ಬಳಿ ಇದ್ದಾಗ ಸಹಜವಾಗಿಯೇ ಮಾತ್ಸರ್ಯ ಉಂಟಾಗುತ್ತದೆ. ಹೀಗೆ ಆಸೆ ಎಂಬ ರಕ್ತಬೀಜಾಸುರ ಸಂತತಿಯು ಅರಿಷಡ್ವರ್ಗಗಳ ಉದಯಕ್ಕೆ ಕಾರಣವಾಗುತ್ತದೆ..**

# ಕಾಯಕನಿಷ್ಠ ದಂಪತಿಗಳು... ಆಯ್ದಕ್ಕಿ ಲಕ್ಕಮ್ಮ ಮತ್ತು ಮಾರಯ್ಯ

ಈ ದಂಪತಿಗಳು ಪರಮ ಕಾಯಕನಿಷ್ಠ ದಾಸೋಹ ಜೀವಿಗಳು. ಕಾಯಕದಲ್ಲಿಯೇ ತಮ್ಮ ತನು ಮನಗಳನ್ನು ತೊಡಗಿಸಿಕೊಂಡವರು. ಇವರ ಕಾಯಕ ನಿಷ್ಠೆಯನ್ನು ಜಗಕ್ಕೆ ತೋರಿಸಲು ಒಮ್ಮೆ ಸಾಕ್ಷಾತ ಶಿವನು ಪತ್ನಿ ಸಮೇತನಾಗಿ ಭೂಲೋಕಕ್ಕೆ ಬಂದನು. ಅದು ಅತ್ಯಂತ ಚಳಿಗಾಲದ ದಿನಗಳು. ವಯಸ್ಸಾದ ಭಿಕ್ಷುಗಳ ವೇಷದಲ್ಲಿ ಬಂದ ಶಿವ ಪಾರ್ವತಿಯರು ಈ ದಂಪತಿಗಳ ಮನೆ ಮುಂದೆ ಬಂದು ನಿಂತರು. ಕಡುಚಳಿಗೆ ನಡುಗುತ್ತಿದ್ದ ವೃದ್ಧ ದಂಪತಿಗಳನ್ನು ನೋಡಿದ ಈ ದಂಪತಿಗಳು ಅವರಿಗೆ ಆರೋಗಣೆಗೆ ತಯಾರು ಮಾಡಿ ಉಣಬಡಿಸಿದರು. ಉಂಡು ಸಂತುಷ್ಟರಾದ ವೃದ್ಧ ದಂಪತಿಗಳು ಇನ್ನೇನು ತೆರಳಬೇಕೆನ್ನುವಾಗ ಹಾಕಿಕೊಳ್ಳಲು ಅವರುಟ್ಟ ಬಟ್ಟೆಯನ್ನೇ ದಾನವಾಗಿ ಕೇಳಿದರು. ಅವರ ಬಳಿ ಇದ್ದದ್ದು ಒಂದು ಜೊತೆ ಬಟ್ಟೆಗಳು ಮಾತ್ರ. ಆದರೂ ಅಳುಕದೆ ಒಂದು ತುಂಡು ವಸ್ತ್ರವನ್ನು ತಮ್ಮಮೈಗೆ ಸುತ್ತಿಕೊಂಡು ತಾವುಟ್ಟ ಬಟ್ಟೆಗಳನ್ನು ಕಳಚಿ ವೃದ್ಧ ದಂಪತಿಗಳಿಗೆ ಕೊಟ್ಟು ಕಳುಹಿಸಿದರು ಈ ಶರಣ ದಂಪತಿಗಳು.... ಅವರೇ ಕಾಯಕನಿಷ್ಠ ದಂಪತಿಗಳಾದ ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯ.

ಮೂಲತಃ ರಾಯಚೂರು ಜಿಲ್ಲೆಯ ಅಮರೇಶ್ವರದಲ್ಲಿ ವಾಸವಾಗಿದ್ದ ಆಯ್ದಕ್ಕಿ ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳು ದಲಿತ ವರ್ಗಕ್ಕೆ ಸೇರಿದವರು. ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿ ಕಲ್ಯಾಣಕ್ಕೆ ವಲಸೆ ಹೋದ ಈ ದಂಪತಿಗಳು ಅಲ್ಲಿ ಮಹಾ ಮನೆಯ ಉಗ್ರಾಣದ ಹೊರ ಭಾಗದಲ್ಲಿ ಹಸನು ಮಾಡುವಾಗ, ಚಪ್ಪರಿಸಿ ಸ್ವಚ್ಛ ಮಾಡುವಾಗ ಚೆಲ್ಲಿದ ಧಾನ್ಯಗಳನ್ನು ಆಯುವುದು ಈತನ ಕಾಯಕವಾಗಿತ್ತು. ಇದರ ಜೊತೆ ಜೊತೆಗೆ ಊರಿನ ಪ್ರತಿ ಮನೆಯ ಮುಂದೆ ಚೆಲ್ಲಲ್ಪಟ್ಟ ಅಕ್ಕಿಯನ್ನು ಪ್ರತಿದಿನವೂ ಅಂದಂದಿನ ಅವಶ್ಯಕತೆಗೆ ಬೇಕಾದಷ್ಟೇ ಆಯ್ದುಕೊಂಡು ಹೋಗುತ್ತಿದ್ದ ಮಾರಯ್ಯನವರು ಅಪರಿಗ್ರಹಕ್ಕೆ ಇನ್ನೊಂದು ನಿದರ್ಶನವಾಗಿದ್ದರು.

ಮಾರಯ್ಯನವರು ಮತ್ತು ಅವರ ಪತ್ನಿ ಲಕ್ಕಮ್ಮ ಬಸವಣ್ಣನವರ ಅನುಯಾಯಿಗಳಾಗಿದ್ದು ಮಹಾಮನೆಯ ಶರಣಗಣದ ಅನುಭಾವಿಗಳಲ್ಲಿ ಒಬ್ಬರಾಗಿದ್ದರು. ಅವರಿಬ್ಬರು ವಚನಗಳನ್ನು ರಚಿಸಿದ್ದು ಮಾರಯ್ಯನವರ ವಚನಗಳ ಅಂಕಿತ ಅಮರೇಶ್ವರ ಲಿಂಗ ಎಂದಾದರೆ ಲಕ್ಕಮ್ಮನ ವಚನಗಳ ಅಂಕಿತ ಮಾರಯ್ಯಪ್ರಿಯ ಅಮರೇಶ್ವರ ಲಿಂಗ ಎಂದಾಗಿತ್ತು. ಪ್ರತಿದಿನ ಮಾರಯ್ಯನವರ ಕಾಯಕವನ್ನು ನೋಡುತ್ತಿದ್ದ ಬಸವಣ್ಣನವರು,ತಮ್ಮ ಮನೆಯ ಮುಂದೆ ಮಾರಯ್ಯನವರು ಆಯ್ದುಕೊಳ್ಳಲು ಬರುವ ದಿನ ಮಾರಯ್ಯನವರಿಗೆ ಅನುಕೂಲವಾಗಲೆಂದು ಮನೆಯ ಅಂಗಳದಲ್ಲಿ ತುಸು ಹೆಚ್ಚೇ ಅಕ್ಕಿಯನ್ನು ಚಲ್ಲಿಸಿದರು. ಅಕ್ಕಿಯನ್ನು ಆಯಲು ಬಂದ ಮಾರಯ್ಯ ಚೆಲ್ಲಿದ್ದ ಹೆಚ್ಚು ಅಕ್ಕಿಯನ್ನು ಆಯ್ದುಕೊಂಡರು. ಮನೆಗೆ ತಂದು ಲಕ್ಕಮ್ಮನವರ ಕೈಯಲ್ಲಿ ಇಟ್ಟಾಗ ಲಕ್ಕಮ್ಮನವರು ಎಂದಿಗಿಂತ ತುಸು ಹೆಚ್ಚಾಗಿದ್ದ ಅಕ್ಕಿಯನ್ನು ನೋಡಿ ಇದೇನು ಇಷ್ಟೊಂದು ಅಕ್ಕಿ? ಎಂದು ಪ್ರಶ್ನಿಸಿದಳಲ್ಲದೇ ಉಳಿದ ಅಕ್ಕಿಯನ್ನು ಮಹಾಮನೆಗೆ ಮರಳಿಸಲು ಕೇಳಿಕೊಂಡಳು. ಅದಕ್ಕೆ ಉತ್ತರವಾಗಿ ಮಾರಯ್ಯ ಹಾಗೆ ಮರಳಿಸಲು ಹೋದರೆ ಬಸವಣ್ಣನವರು ತಪ್ಪು ತಿಳಿದುಕೊಳ್ಳುವುದಿಲ್ಲವೇ? ಇರಲಿ ಬಿಡು ಈಸಕ್ಕಿ ಏನು ಪಾಲು ಬೇಡೀತು ಎಂದನು.

ಅದಕ್ಕೆ ಉತ್ತರವಾಗಿ ಲಕ್ಕಮ್ಮನು ಆಸೆ ಎಂಬುದು ಅರಸಂಗಲ್ಲದೆ ಶಿವ ಭಕ್ತರಿಗುಂಟೆ ಅಯ್ಯಾ? ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯಾ? ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ



ಚಿತ್ರ: ಸಾಮಾಜಿಕ ಜಾಲತಾಣ

**ಶರಣ ಆಯದಕ್ಕಿ ಮಾರಯ್ಯ ದಂಪತಿಗಳು**



**ವೀಣಾ ಹೇಮಂತಗೌಡ ಪಾಟೀಲ್, ಮುಂಡರಗಿ**

ಎಂದು ಹೇಳಿದಳು. ಜೊತೆಗೆ ಈ ರೀತಿ ಆಸೆ ಪಡುವುದರಿಂದ ಅರಿಷಡ್ವರ್ಗಗಳಿಗೆ ನೀವು ದಾಸರಾಗುವಿರಿ ಎಂದು ಎಚ್ಚರಿಸಿದಳು. ಹಾಗಾದರೆ ನಾನು ಆಸೆ ಪಡುತ್ತಿದ್ದೇನೆಯೇ ... ಅದು ಹೇಗೆಂದು ವಿವರಿಸು ಎಂದು ಮಾರಯ್ಯನವರು ಕೇಳಿದಾಗ ಲಕ್ಕಮ್ಮ ತಾಯಿ ಹೀಗೆ ಹೇಳುತ್ತಾಳೆ... ತುಸು ಹೆಚ್ಚು ಇರಲಿ ಎಂದು ನೀವು ಆಶಿಸುವುದು ಕಾಮ ವಾದರೆ, ಅದು ಸಿಗದೇ ಹೋದಾಗ ನಿಮಗೆ ಬರುವ ಸಿಟ್ಟು ಕ್ರೋಧ ಅನಿಸುತ್ತದೆ ಇನ್ನೂ ಹೆಚ್ಚು ಬೇಕೆಂಬ ಆಸೆ ಲೋಭ ಎನಿಸಿದರೆ ಹೀಗೆಯೇ ಹೆಚ್ಚು ಉಳಿಯಲಿ ಎಂಬುದು ಮೋಹ ಎನಿಸುತ್ತದೆ. ಹಾಗೆ ನಮ್ಮಲ್ಲಿ ಹೆಚ್ಚಿನ ವಸ್ತುಗಳ ಸಂಗ್ರಹವಾದಾಗ ನಮ್ಮಲ್ಲಿ ಸಹಜವಾಗಿಯೇ ಅಹಂ ಎಂಬ ಮದ ಬರುತ್ತದೆ. ನಮಗಿಂತ ತುಸು ಹೆಚ್ಚು ಬೇರೆಯವರ ಬಳಿ ಇದ್ದಾಗ ಸಹಜವಾಗಿಯೇ ಮಾತ್ಸರ್ಯ ಉಂಟಾಗುತ್ತದೆ. ಹೀಗೆ ಆಸೆ ಎಂಬ ರಕ್ತಬೀಜಾಸುರ ಸಂತತಿಯು ಅರಿಷಡ್ವರ್ಗಗಳ ಉದಯಕ್ಕೆ ಕಾರಣವಾಗುತ್ತದೆ ಎಂದು ಸಾಧ್ವಿ ಲಕ್ಕಮ್ಮ ಹೇಳಿದಾಗ ಆಕೆ ತನ್ನ ಪತ್ನಿಯಂತೆ ತೋರದೆ ಅಜ್ಞಾನವನ್ನು ತೊಡೆದು ಹಾಕುವ ಗುರುವಾಗಿ ಕಂಡಳು ಮಾರಯ್ಯನವರಿಗೆ. ಆಕೆಯ ಜ್ಞಾನ ಮತ್ತು ವಿವೇಕದ ನುಡಿಗಳನ್ನು ಕಂಡು ಪರಮಾನಂದವಾಗಿ ಅಂತೆಯೇ ಮುಂದೇನು ಮಾಡಬೇಕು ಎಂದು ಪ್ರಶ್ನಿಸಿದ ಮಾರಯ್ಯನವರಿಗೆ ಲಕ್ಕಮ್ಮ ಅಕ್ಕಿಯನ್ನು ಮರಳಿಸಿ ಎಂದು ಹೇಳಿದಳಲ್ಲದೆ, ಆಸೆಪಟ್ಟುದಕ್ಕೆ ಪ್ರಾಯಶ್ಚಿತ್ತವಾಗಿ ಬಸವಾದಿ ಪ್ರಮಥರೆಲ್ಲರನ್ನು ದಾಸೋಹಕ್ಕೆ ಕರೆಯಬೇಕೆಂದು ಆಗ್ರಹಿಸಿದಳು. ನಾವು ಬಡವರು ಅವರೆಲ್ಲ ನಾವು ಕರೆದರೆ ಬರುವರೆ ಎಂಬ ಮಾರಯ್ಯನ ಮಾತಿಗೆ... ಶರಣರೆಲ್ಲರೂ ನಮಗೆ ಬಂಧುಗಳು

"ಅಂಜದಿರು ಎನ್ನಾಳ್ದ ,ಮನಶುದ್ದವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ ಚಿತ್ತಶುದ್ಧದಲ್ಲಿ ಕಾಯಕವ ಮಾಡುವ ಸದ್ಭಕ್ತ0ಗೆ ಎತ್ತ ನೋಡಿದತ್ತ ಲಕ್ಷ್ಮಿ ತಾನಾಗಿಪ್ಪಳು ಮಾರಯ್ಯಪ್ರಿಯ ಅಮರೇಶ್ವರ ಲಿಂಗದ ಸೇವೆಯುಳ್ಳನ್ನಕ್ಕ ಎಂದು ಧೈರ್ಯ ಹೇಳಿದಳು. ಆಕೆಯ ಆಶಯದಂತೆ ಮಾರಯ್ಯನು ಎಲ್ಲಾ ಶರಣವನ್ನು ದಾಸೋಹಕ್ಕೆ ಆಮಂತ್ರಿಸಿದನು. ಅಂದು ಆಕೆ ಮಾಡಿದ ಅಡುಗೆಯನ್ನು ಸಮಸ್ತ ಶರಣರು ಹೊಟ್ಟೆ ತುಂಬ ಉಂಡರು. ಒಂದು ಲೆಕ್ಕದ ಪ್ರಕಾರ ಆಕೆ ಆ ದಿನ ಬೊಗಸೆ ಅಕ್ಕಿಯಲ್ಲಿ ಒಂದು ಲಕ್ಷ ತೊಂಬತ್ತಾರು ಸಾವಿರ ಗಣಗಳಿಗೆ ಉಣಬಡಿಸಿದಳು ಎಂದು ಹೇಳಲಾಗುತ್ತದೆ. ಭಕ್ತರ ಭಕ್ತಿಗೆ ಅವರ ಅಡುಗೆಯ ಮನೆ ಅಕ್ಷಯವಾಗದೇ ಇದ್ದೀತೆ?? ಅವರ ಮನೆಯ ಅಡುಗೆಯ ರುಚಿಯನ್ನು ಕಂಡು ಬಸವಣ್ಣನವರು "ಮನೆ ನೋಡಾ ಬಡವರು ಮನ ನೋಡಾ ಸಂಪನ್ನರು ಧನ ನೋಡಾ ಬಡವರು ಘನಮನ ಸಂಪನ್ನರು ಕೂಡಲಸಂಗನ ಶರಣರು ಕರುಳಿಲ್ಲದ ಕಲಿಗಳು ಆರಿಗೆ ಉಪಮಿಸಬಹುದು" ಎಂದು ಕೊಂಡಾಡಿದರು.

ಮತ್ತೊಮ್ಮೆ ಶರಣರೆಲ್ಲ ಅನುಭವ ಮಂಟಪದಲ್ಲಿ ಸೇರಿದಾಗ ಮಾರಯ್ಯನವರು ಕಾಯಕದ ಬಗ್ಗೆ ಶಾಸನವಾಗಬಲ್ಲಂತಹ ವಚನವೊಂದನ್ನು ಪ್ರಭುದೇವರ ಮುಂದಿರಿಸಿದರು "ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು, ಲಿಂಗ ಪೂಜೆಯಾದರೂ ಮರೆಯಬೇಕು, ಜಂಗಮ ಮುಂದಿದ್ದರೂ ಹಂಗು ಹರಿಯಬೇಕು, ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು". ಕಾಯಕಕ್ಕೆ ಮಾರಯ್ಯನವರು ಪಟ್ಟ ಕಟ್ಟಿದ ರೀತಿಯನ್ನು ಕಂಡು ಅವರನ್ನು ಮತ್ತೆ ಮತ್ತೆ ಪ್ರಶ್ನಿಸಿ ಉತ್ತರವನ್ನು ಪಡೆದರು ಅಲ್ಲಮ ಪ್ರಭುದೇವರು. ಕಾಯಕ ಕೇವಲ ಕಾಯಕವಾಗಿ ಉಳಿಯಬಾರದು ಮಾಟ ಮಾಟಕ್ಕೆ ನಿಲ್ಲಬಾರದು ಮಾಟದಿಂದಲೇ ಬೇರೊಂದ ನರಿಯಬೇಕು ಅಂತೆಯೇ ಕಾಯಕ ಅರಿವಿನತ್ತ ಕರೆದೊಯ್ಯಬೇಕು. ಆ ಅರಿವು ನೆಮ್ಮದಿಯನ್ನು ಒಡಗೂಡಿ ಬಯಲ ಭ್ರಮೆಯನ್ನು ಕಳೆಯಬೇಕು ಎಂದು ತಿಳಿ ಹೇಳಿದರು. ಮಾಟ, ಅರಿವು, ನೆಮ್ಮಗೆ ಎಂಬ ಮೂರು ಮಾತುಗಳನ್ನು ಪದೇ ಪದೇ ಹೇಳಿಕೊಳ್ಳುತ್ತಾ ಅದರ ಅರ್ಥವನ್ನು ಅರಿತು ಅದರಂತೆ ನಡೆಯಬೇಕು ಎಂದು ಮನದ ತಿಮಿರವನ್ನು ಕಳೆದುಕೊಳ್ಳುತ್ತಿದ್ದ ಮಾರಯ್ಯನವರನ್ನು ಪತ್ನಿ ಕಾಯಕ ನಿಂದಿತ್ತು ಏಳಯ್ಯ ಎನ್ನಾಳ್ದನೆ, ಭಾವ ಶುದ್ಧವಾಗಿ ಮಹಾಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು ನಿಶ್ಚಯಿಸಿ ಮಾಡಬೇಕು ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ ಬೇಗ ಹೋಗಿ ಮಾರಯ್ಯಾ ಎಂದು ಎಚ್ಚರಿಸಿದಳು.

ಹೀಗೆ ಸತಿಪತಿಗಳೊಂದಾದ ಭಕ್ತಿಯನ್ನು ಹೊಂದಿದ ಮಾರಯ್ಯ ಮತ್ತು ಲಕ್ಕಮ್ಮ ದಂಪತಿಗಳು ಒಬ್ಬರಿಗೊಬ್ಬರು ಪೂರಕವಾಗಿ ಬದುಕಿದರು. ಇಂತಹ ಶರಣ ದಂಪತಿಗಳು ತೋರಿದ ಬೆಳಕಿನಲ್ಲಿ ನಾವು ನಡೆಯೋಣ ಎಂಬ ಸಂಕಲ್ಪವನ್ನು ಮಾಡೋಣ...

# ಅಂಕಕ್ಕಿಂತ ಅರಿವು ಹೆಚ್ಚಳಕ್ಕಿರಲಿ ಆದ್ಯತೆ

## ಸರ್ಕಾರಿ ಪ್ರೌಢಶಾಲಾ ಶಿಕ್ಷಣದಲ್ಲಿ ಪೂರಕ ವಾತಾವರಣ ನಿರ್ಮಾಣ ಹೇಗೆ?

ಮಂಗಳೂರು, ಉಡುಪಿ ಭಾಗದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಹೆಚ್ಚು ಫಲಿತಾಂಶ ಪಡೆಯಲು ಹಲವಾರು ಕಾರಣಗಳಿವೆ. ಅಲ್ಲಿನ ಎಸ್ಎಸ್ಎಲ್ಸಿ ಫಲಿತಾಂಶ ಹಾಗೆಯೇ ಪಿಯುಸಿ ಫಲಿತಾಂಶ ಉತ್ತಮವಾಗಿ ಬರುವುದು ಸರ್ವೇಸಾಮಾನ್ಯ. ಅಲ್ಲಿನ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳು ಶಿಕ್ಷಕರು ಪೋಷಕರು ಹೆಚ್ಚಿನ ಕಾಳಜಿ ವಹಿಸುತ್ತಾ ಹೆಚ್ಚಿನ ಫಲಿತಾಂಶ ಪಡೆಯಲು ದಿನನಿತ್ಯ ಗಮನಹರಿಸುತ್ತಾರೆ. ಶಿಕ್ಷಕರ ವಿದ್ಯಾರ್ಥಿಗಳ ಪೋಷಕರ ಹಾಗೂ ಎಸ್ಡಿಎಂಸಿ ಅವರ ಸಮಯ ಪ್ರಜ್ಞೆ ಮೆಚ್ಚುವಂತಹದ್ದು. ಅಲ್ಲಿನ ಬಹುತೇಕ ವಿದ್ಯಾರ್ಥಿಗಳು ಉತ್ತರ ಕರ್ನಾಟಕದ ಭಾಗದ ವಿದ್ಯಾರ್ಥಿಗಳೇ ಆಗಿರುತ್ತಾರೆ. ಕಾರಣ ಮಂಗಳೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೂಲಿಗಾಗಿ ಬಹಳಷ್ಟು ಮಂದಿ ಅಲ್ಲಿಗೆ ತೆರಳಿ ಮಕ್ಕಳ ವಿದ್ಯಾಭ್ಯಾಸವನ್ನು ಅಲ್ಲಿಯೇ ಸರ್ಕಾರಿ ಪ್ರೌಢಶಾಲೆಗಳಲ್ಲಿ ಬಹುತೇಕರು ಮಾಡಿಸುತ್ತಿದ್ದಾರೆ. ಮೂಲತಃ ತುಳುನಾಡಿನ ವಿದ್ಯಾರ್ಥಿಗಳು ಅಲ್ಲಿನ ಸರ್ಕಾರಿ ಶಾಲೆಗಳಲ್ಲಿ ಓದುತ್ತಿದ್ದರೂ ಆ ಮಕ್ಕಳ ಗುಣಮಟ್ಟ ಉತ್ತಮದೆ ಆಗಿರುತ್ತದೆ. ಆದರೆ ಉತ್ತರ ಕರ್ನಾಟಕದ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಕಡಿಮೆ ಎನಿಸುವುದು. ಆದರೂ ಎಸ್ ಎಸ್ ಎಲ್ ಸಿ ಫಲಿತಾಂಶ ಉತ್ತಮ ಬರಲು ಬಹು ಮುಖ್ಯ ಕಾರಣ ಅಲ್ಲಿನ ಅಧಿಕಾರಿಗಳು ಶಿಕ್ಷಕರು ಮತ್ತು ಪೋಷಕರು ಹಾಗೆಯೇ ಪಾಸ್ ಆಗಬೇಕಾದರೆ ಅನಿವಾರ್ಯವಾಗಿ ಕಷ್ಟಪಡಲೇಬೇಕೆಂಬ ವಿದ್ಯಾರ್ಥಿಗಳ ಒತ್ತಾಸೆ ಇದಕ್ಕೆಲ್ಲ ಕಾರಣ ಎಂದರೆ ತಪ್ಪಾಗಲಾರದು.

ಮಂಗಳೂರಿನಲ್ಲಿ ಒಂಬತ್ತು ವರ್ಷದ ನನ್ನ ಶಿಕ್ಷಕರ ಸೇವೆಯಲ್ಲಿ ಐದು ವರ್ಷಗಳ ಕಾಲ ನಿರಂತರವಾಗಿ ಎಸ್ ಎಸ್ ಎಲ್ ಸಿ ಫಲಿತಾಂಶ ಸುಧಾರಣೆಗಾಗಿ ಡಿಸೆಂಬರ್ ನಿಂದ ಏಪ್ರಿಲ್ ಪರೀಕ್ಷೆ ಮುಗಿಯುವವರೆಗೂ ನಮ್ಮ ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಮನೆಗೆ ನಾನು ಕನಿಷ್ಠ ನಾಲ್ಕು ಐದು ಬಾರಿ ವರ್ಷಕ್ಕೆ ಭೇಟಿ ನೀಡುತ್ತಿದ್ದೆ. ಆ ಸಮಯ ಸಂದರ್ಭದಲ್ಲಿ ಅಲ್ಲಿನ ಪೋಷಕರ ಕಾಳಜಿ ಎದ್ದು ಕಾಣುತ್ತಿತ್ತು.

ಆ ಭಾಗದ ಪೋಷಕರು ಮಕ್ಕಳ ಮದುವೆಗೆ ಆತುರ ಪಡುವುದಿಲ್ಲ. ಕನಿಷ್ಠ ಡಿಗ್ರಿ ಪಡೆದ ಮೇಲೆ ಮದುವೆ ಬಗ್ಗೆ ಯೋಚಿಸುತ್ತಾರೆ. ಅಲ್ಲದೆ ಡಿಗ್ರಿ ಪಡೆದ ಮೇಲೂ ಅವರು ಯಾವುದೇ ಬಹುತೇಕ ಖಾಸಗಿ ಕೆಲಸಕ್ಕೆ ಹೋಗುತ್ತಾರೆ. ಹೆಣ್ಣು ಮಕ್ಕಳು ಸಹ ಕೆಲಸಕ್ಕೆ ಹೋದರೂ ಮನೆಯವರ ಸಂಪೂರ್ಣ ಇಚ್ಛೆ ಹಾಗೂ ಒಪ್ಪಿಗೆ ಇರುವುದು ಸಾಮಾನ್ಯವಾಗಿ ಕಂಡುಬರುವ ವಿಚಾರ. ಅಲ್ಲಿನ ಸಂಘ ಸಂಸ್ಥೆಗಳು ಸಹ ವಿದ್ಯಾರ್ಥಿಗಳ ಶಾಲಾ ಶಿಕ್ಷಣಕ್ಕೆ ಅಗತ್ಯವಾದ ಪುಸ್ತಕ ಬ್ಯಾಗು ಹಾಗೂ ಇನ್ನಿತರೆ ಶಾಲೆಗೆ ಬೇಕಾಗುವ ಭೌತಿಕ ಸೌಲಭ್ಯಗಳನ್ನು ನಿರಂತರವಾಗಿ ಕೊಡುತ್ತಾ ಬಂದಿದೆ. ಎಸ್ಡಿಎಂಸಿ ಸದಸ್ಯರು ಸಹ ಸಭೆಗಳಲ್ಲಿ ಭಾಗವಹಿಸಿ ಪೂರಕ ಸಲಹೆಗಳನ್ನ ನೀಡುತ್ತಾ ಕಾರ್ಯಗಳ ಪ್ರಗತಿಯನ್ನು ಅವಲೋಕಿಸುತ್ತ ಬಂದಿದೆ.

ವಾರ್ಷಿಕ ಪರೀಕ್ಷಾ ಸಂದರ್ಭದಲ್ಲಿ ಆ ಭಾಗದಲ್ಲಿ ಆಚರಿಸುವ ಸ್ಕೂಲ್ ಡೇ ಕೋಲ ನೇಮ ಪಂಜುರ್ಲಿ ಗುಳಿಗ ಯಕ್ಷಗಾನ ಚಂಡೆ ಕಂಬಳ ಮುಂತಾದ ಕಾರ್ಯಕ್ರಮಗಳು ಹೆಚ್ಚಾಗಿ ನಡೆದರೂ ಅದರಲೆಲ್ಲ ಬಹುತೇಕ ವಿದ್ಯಾರ್ಥಿಗಳು ಭಾಗವಹಿಸಿ ಕೊನೆಗೆ ನಡೆಯುವ ಪರೀಕ್ಷೆಯಲ್ಲಿಯೂ ಸಹ ಹೆಚ್ಚು ಅಂಕ ಪಡೆಯುವುದು ಸೋಜಿಗವಾದರೂ ಅದರ ಹಿಂದೆ ಒಟ್ಟಾರೆ ಶಿಕ್ಷಣ ಇಲಾಖೆ ಕಾರ್ಯ ಇರುವುದು ಅಷ್ಟೇ ಸತ್ಯ.

ಶಿಕ್ಷಣದಲ್ಲಿ ಶಿಕ್ಷಕರು ಪೋಷಕರು ಹಾಗೂ ವಿದ್ಯಾರ್ಥಿಗಳು ಎಸ್ ಡಿ ಎಂ ಸಿ ಒಗ್ಗೂಡಿ ಮಾಡುವ ಪ್ರಯತ್ನವೇ ಉತ್ತಮ ಫಲ ನೀಡೀತು ಎಂದರೆ ಅತಿಶಯೋಕ್ತಿಯಾಗಲಾರದು.

ವಿಜಯನಗರ ಹಾಗೂ ಬಳ್ಳಾರಿ ಭಾಗದ ವಿದ್ಯಾರ್ಥಿಗಳು ಫಲಿತಾಂಶ ಕಡಿಮೆ ಇರಲು ಸಹ ಹಲವಾರು ಕಾರಣಗಳಿವೆ. ಮೊದಲನೆಯದಾಗಿ ಇಲ್ಲಿನ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು. ಇಲ್ಲಿನ ಪೋಷಕರು ಆರ್ಥಿಕ ದುಸ್ಥಿತಿಯಲ್ಲಿದ್ದಾರೆ. ಇಲ್ಲಿನ ಶಿಕ್ಷಣ ಇಲಾಖೆಯ ಅಧಿಕಾರಿಗಳು ಶಿಕ್ಷಕರಿಂದ ಹೆಚ್ಚಿನ ಪ್ರಯತ್ನ ಕಂಡುಬಂದರೂ ಫಲಿತಾಂಶ ಇಳಿಮುಖವಾಗುತ್ತಿದೆ.

ಸಾಮಾಜಿಕವಾದ ಕಾರಣಗಳು ಇಲ್ಲಿನ ಎಸ್ ಎಸ್ ಎಲ್ ಸಿ ಫಲಿತಾಂಶ ಹಿನ್ನೆಲೆಯಲ್ಲಿ ಬಹು ಮುಖ್ಯ ಪಾತ್ರ ವಹಿಸುವುದರಲ್ಲಿ ಯಾವುದೇ ಅನುಮಾನ ಇಲ್ಲ. ಪೋಷಕರ ಅನಕ್ಷರತೆ ಕುಡಿತ ಕುಟುಂಬದಲ್ಲಿನ ಯಜಮಾನನ ಅಗಲಿಕೆ ಉದಾಸೀನತೆ ಗಂಡ ಹೆಂಡತಿ ಕೂಲಿ ಕೆಲಸಕ್ಕೆ ದಿನನಿತ್ಯ ಹೋಗುವುದು ದುಃಸ್ಥಿತಿಯಲ್ಲಿರುವ ಮನೆ, ಬಾಲ್ಯ ವಿವಾಹ ಅಲ್ಲಲ್ಲಿ ಕಂಡುಬರುವುದು. ಮದುವೆ ಮಾಡಿಸಿ ಹೆಣ್ಣು ಮಕ್ಕಳನ್ನು ಕಳಿಸುವ ಆತುರತೆ ಇಲ್ಲಿನ ಬಹುತೇಕ ಪೋಷಕರಲ್ಲಿ ಇದೆ.

ಈ ಎಲ್ಲಾ ಅಂಶಗಳು ನನಗೆ ಕಂಡು ಬಂದಿದ್ದು ಹೊಸಪೇಟೆಯಲ್ಲಿ ಹಾಗೂ ಸುತ್ತಲಿನ ಹಲವಾರು ಹಳ್ಳಿಗಳಲ್ಲಿ ವಾಸಿಸುತ್ತಿರುವ ನಮ್ಮ ವಿದ್ಯಾರ್ಥಿಗಳ ಮನೆ ಭೇಟಿಯನ್ನು ಆರಂಭಿಸಿದಾಗ. ಎಸ್ ಎಸ್ ಎಲ್ ಸಿ ಫಲಿತಾಂಶ ಸುಧಾರಣೆಗಾಗಿ ಈ ವರ್ಷ ಆಗಸ್ಟ್ ನಿಂದ ಮನೆಭೇಟಿ ಕನಿಷ್ಠ 70 ಮನೆಗಳ ಭೇಟಿ ನೀಡಿದ್ದೇನೆ. ಆಗಾಗ ನಮ್ಮ ಶಾಲೆಯ ಮುಖ್ಯೋಪಾಧ್ಯಾಯರು ಸಹ ನನ್ನ ಕಾರ್ಯದಲ್ಲಿ ಭಾಗವಹಿಸಿರುತ್ತಾರೆ ಕೈಜೋಡಿಸಿದ್ದಾರೆ. ವರ್ಷ ದಲ್ಲಿ ಕನಿಷ್ಠ 70 ಮಕ್ಕಳ ಮನೆ ಭೇಟಿಯನ್ನು ನಾಲ್ಕು ಐದು ಬಾರಿ ನೀಡಲು ನಿರ್ಧರಿಸಿದ್ದೇನೆ.

ಆಗಸ್ಟ್ ಸೆಪ್ಟೆಂಬರ್ ತಿಂಗಳಿನಲ್ಲಿ ಮೊದಲ ಭೇಟಿಯಲ್ಲಿ ಪೋಷಕರು ಹಾಗೂ ವಿದ್ಯಾರ್ಥಿಗಳು ಸ್ವಲ್ಪ ಆಶ್ಚರ್ಯ ಅಷ್ಟೇ ಅಳುಕಿನಲ್ಲಿ ನಮ್ಮನ್ನು ಬರ ಮಾಡಿಕೊಳ್ಳುವ ಸಂದರ್ಭ ಸಾಮಾನ್ಯವಾಗಿ ಇಲ್ಲಿ ಕಂಡುಬರುವುದು. ವಿದ್ಯಾರ್ಥಿಗಳ ಸಾಮಾಜಿಕ ಆರ್ಥಿಕ ಹಾಗೂ ಶೈಕ್ಷಣಿಕ ವಿಚಾರಗಳ ವಿನಿಮಯ ಈ ಅವಧಿಯಲ್ಲಿ ಆಗುವುದು. ಕುಂದು ಕೊರತೆಗಳು ಕಂಡು ಬಂದಲ್ಲಿ ಅವುಗಳನ್ನ ಸುಧಾರಿಸಲು ಪ್ರಯತ್ನಿಸುವುದು. ಈ ಮೂಲಕ ಎಸ್ಎಸ್ಎಲ್ಸಿ ಫಲಿತಾಂಶದ ಮಹತ್ವ ಜಾಗೃತಿಯನ್ನು ವಿದ್ಯಾರ್ಥಿಗಳಲ್ಲಿ ಹಾಗೂ ಪೋಷಕರಲ್ಲಿ ಮೂಡಿಸುವ ಪ್ರಯತ್ನ ಸಾಗಿದೆ.

ಇಲ್ಲಿನ ವಿದ್ಯಾರ್ಥಿಗಳು ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತೀರ್ಣ ಆದರೂ ಪಿಯುಸಿ ಸೆಕೆಂಡ್ ಇಯರ್ ನಲ್ಲಿ ಅನುತ್ತೀರ್ಣವಾಗಿರುವುದು. ಅದರಲ್ಲಿನ ಲೋಪದೋಷಗಳನ್ನು ಸರಿಪಡಿಸಬೇಕಾಗಿದೆ.

ಸರ್ಕಾರ ಕೂಡ ಈ ವರ್ಷದಿಂದ ಎಸ್ ಎಸ್ ಎಲ್ ಸಿ ಫಲಿತಾಂಶ ಸುಧಾರಿಸಲು ಗುಣಮಟ್ಟದ ಪರೀಕ್ಷಾ ಸಿದ್ಧತೆ ಮಾಡಿಕೊಂಡಿದೆ. ಹಲವಾರು ಬದಲಾವಣೆಯ ಪ್ರಯತ್ನಕ್ಕೆ ಕೈ ಹಾಕಿದೆ ಇದಕ್ಕೆ ಇಲಾಖೆಯ ಅಧಿಕಾರಿಗಳು ಶಿಕ್ಷಕರು ವಿದ್ಯಾರ್ಥಿಗಳು ಹಾಗೂ ಪೋಷಕರು ಪೂರಕ ವಾತಾವರಣವನ್ನು ನಿರ್ಮಿಸುವ ಅಗತ್ಯತೆ ಇದೆ. ಇಲ್ಲಿಯೂ ಶಿಕ್ಷಕರು ಪೋಷಕರು ವಿದ್ಯಾರ್ಥಿಗಳು ಹಾಗೂ ಎಸ್ ಡಿ ಎಮ್ ಸಿ ಸದಸ್ಯರ ಮನೋಭಾವನೆಗಳು ಪರೀಕ್ಷಾ ಫಲಿತಾಂಶ ಸುಧಾರಿಸುವಲ್ಲಿ ಪ್ರಧಾನ ಪಾತ್ರ ವಹಿಸುವುದು ಎಂಬುದು ನಿರ್ವಿವಾದ.

– **ಸೋಮಪ್ಪ ಎಂ.,** ಶಿಕ್ಷಕರು,
ಸರ್ಕಾರಿ ಬಾಲಕಿಯರ ಪ್ರೌಢಶಾಲೆ
ಮಾಜಿ ಪುರಸಭೆ ಹೊಸಪೇಟೆ ವಿಜಯನಗರ ಜಿಲ್ಲೆ.

ಮೈಕ್ರೋ ನ್ಯೂಸ್

## ಹೆಚ್ಚುವರಿ ಮೇವನ್ನು ರೈತರು ಸರ್ಕಾರಕ್ಕೆ ಮಾರಾಟ ಮಾಡಲು ಕರೆ: ಪಶುವೈದ್ಯಾಧಿಕಾರಿ ಡಾ.ಕೊಟ್ರೇಶ್

**ಹಂಪಿ ಟೈಮ್ಸ್ ಕೊಟ್ಟೂರು**
ಬರಪೀಡಿತ ಕೊಟ್ಟೂರು ತಾಲೂಕಿನಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗದಂತೆ ಕಾಯ್ದುಕೊಳ್ಳಲು ತಾಲೂಕಿನ ರೈತರು ಹೆಚ್ಚಿನ ಮೇವನ್ನು ಮಾರು ವವರು ಸರ್ಕಾರಕ್ಕೆ ಮಾರಾಟ ಮಾಡ ಬೇಕೆಂದು



ಕೊಟ್ಟೂರು ತಾಲೂಕು ಪಶು ಸಂಗೋಪನ ಇಲಾಖೆ ವೈದ್ಯಾಧಿಕಾರಿ ಡಾ.ಕೊಟ್ರೇಶ್ ಕರೆ ನೀಡಿದ್ದಾರೆ.
2023-24ನೇ ಸಾಲಿನಲ್ಲಿ ಕೊಟ್ಟೂರು ತಾಲೂಕನ್ನು ಸರ್ಕಾರವು ಬರಪೀಡಿತ ತಾಲೂಕು ಎಂದು ಘೋಷಣೆ ಮಾಡಿರುವ ಹಿನ್ನೆಲೆ ಮುಂದಿನ ದಿನಗಳಲ್ಲಿ ಜಾನುವಾರುಗಳಿಗೆ ಮೇವು ಮತ್ತು ನೀರಿನ ಕೊರತೆಯಾಗದಂತೆ ಮುಂಜಾಗ್ರತಾ ಅಗತ್ಯ ಕ್ರಮಗಳನ್ನ ಕೈಗೊಳ್ಳುವಂತೆ ಸರ್ಕಾರವು ಸೂಚಿಸಿದ ಕಾರಣ ಮಂಗಳವಾರ ಪತ್ರಿಕೆಗೆ ಮಾಹಿತಿ ನೀಡಿದರು.
ಈ ನಿಮಿತ್ತ ಕೊಟ್ಟೂರು ತಾಲೂಕಿನ ರೈತರು ತಮ್ಮ ಬಳಿ ಇರುವ ಹೆಚ್ಚುವರಿ ಮೇವನ್ನು ಸರ್ಕಾರಕ್ಕೆ ಮಾರಾಟ ಮಾಡಲು ಬಯಸಿದಲ್ಲಿ ಮಾರಾಟದ ಮೇವಿನ ಲಭ್ಯತೆ, ಧರಪಟ್ಟಿ ಹಾಗೂ ಇತರೆ ವಿವರಗಳನ್ನು , ಪಶು ಸಂಗೋಪನಾ ಇಲಾಖೆ, ಪಶು ಆಸ್ಪತ್ರೆ, ಕೊಟ್ಟೂರು ಇಲ್ಲಿಗೆ 15 ದಿನಗಳೊಳಗೆ ಹೆಸರು ನೊಂದಾಯಿಸಲು ಸೂಚಿಸಿದ್ದಾರೆ. ಈ ವೇಳೆ, ತಾಲೂಕು ಬರಗಾಲ ಟಾಸ್ಕ್ ಫೋರ್ಸ್ ಸಮಿತಿ ಸದಸ್ಯರು ಸೇರಿದಂತೆ ತಾಲೂಕು ಮಟ್ಟದ ಇತರೆ ಅಧಿಕಾರಿಗಳು ಇದ್ದರು.

## ಜಂಟಿ ಕೃಷಿ ನಿರ್ದೇಶಕರ ಕಚೇರಿ ಸ್ಥಳಾಂತರ

**ಹಂಪಿ ಟೈಮ್ಸ್ ಹೊಸಪೇಟೆ**
ಪ್ರಸ್ತುತ ಎಂ.ಪಿ.ಪ್ರಕಾಶ್ ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯವನ್ನು ಹೊಸಪೇಟೆ ನಗರದ ವಿದ್ಯಾನಗರದಲ್ಲಿ ನೂತನವಾಗಿ ನಿರ್ಮಾಣವಾದ ಸೆಂಟರ್ ಆಫ್ ಎಕ್ಸಲೆನ್ಸ್ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದ್ದು, ಡಿ.1 ರಿಂದ ಕಾರ್ಯಾರಂಭ ಮಾಡಲಾಗಿದೆ.
ನೂತನ ಕಚೇರಿ ವಿಳಾಸ : ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯ, ಕೆ/ಆ ಸೆಂಟರ್ ಆಫ್ ಎಕ್ಸಲೆನ್ಸ್, ನ್ಯಾಷನಲ್ ಕಾಲೇಜ್ ಹಿಂಭಾಗ, ಎನ್.ಸಿ.ಕಾಲೋನಿ, ಹರಿಹರ ರಸ್ತೆ, ಹೊಸಪೇಟೆ-583203. ಸಾರ್ವಜನಿಕರು, ರೈತ ಬಾಂಧವರು ಹಾಗೂ ಇತರೆ ಇಲಾಖೆಯ ಮುಖ್ಯಸ್ಥರುಗಳು ಇನ್ನು ಮುಂದೆ ನೂತನ ಕಚೇರಿ ಸ್ಥಳದಲ್ಲಿ ವ್ಯವಹರಿಸುವಂತೆ ಜಂಟಿ ಕೃಷಿ ನಿರ್ದೇಶಕ ಶರಣಪ್ಪ ಮುದಗಲ್ ತಿಳಿಸಿದ್ದಾರೆ.

## ಇಂದು ಡಾ.ಬಿ.ಆರ್ ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನಾಚರಣೆ

**ಹಂಪಿ ಟೈಮ್ಸ್ ರಾಯಚೂರು**
ಡಿ.6ರಂದು ಬೆಳಿಗ್ಗೆ 9:00 ಗಂಟೆಗೆ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್ ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನಾಚರಣೆಯನ್ನು ಡಾ.ಬಿ.ಆರ್ ಅಂಬೇಡ್ಕರ್ ವೃತ್ತದಲ್ಲಿ ಆಚರಿಸಲಾಗುತ್ತಿದ್ದು, ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು, ದಲಿತ ಸಂಘ ಸಂಸ್ಥೆಗಳ ಮುಖಂಡರು, ಸದಸ್ಯರು, ಡಾ.ಬಿ.ಆರ್ ಅಂಬೇಡ್ಕರ್ ಅವರ ಅನುಯಾಯಿಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

# ಸಂಸ್ಕಾರ ಇಲ್ಲದ ಮಕ್ಕಳು ಭವಿಷ್ಯದ ಸಮಾಜಕ್ಕೆ ಕಂಟಕ



**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**
ಮಕ್ಕಳನ್ನು ಸಂಸ್ಕಾರಯುತರನ್ನಾಗಿ ಬೆಳೆಸಿದಾಗ ಮಾತ್ರ ಉತ್ತಮ ನಾಯಕನಾಗಬಲ್ಲರು. ಇಲ್ಲವಾದರೆ ಸಮಾಜಕ್ಕೆ ಕಂಠಕರಾಗಿ ಹೆತ್ತ ತಂದೆ ತಾಯಿಗೆ ಅಪಕೀರ್ತಿ ತರುತ್ತಾರೆ ಎಂದು ಗದುಗಿನ ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜನವರು ಹೇಳಿದರು.
ಸಮೀಪದ ಡಣಾಪುರ ಗ್ರಾಮದಲ್ಲಿ 23 ನೇ ವರ್ಷದ ಶ್ರೀ ಶರಣ ಬಸವೇಶ್ವರರ ಪುರಾಣ ಮಹಾಮಂಗಲ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಂಡಿದ್ದ ಸಾಮೂಹಿಕ ವಿವಾಹ ಮತ್ತು ಕಲ್ಲಯ್ಯಜ್ಜನವರ 2194 ನೇ ತುಲಾಭಾರ ಕಾರ್ಯಕ್ರಮದಲ್ಲಿ ಸಾನಿಧ್ಯವಹಿಸಿ ಮಾತನಾಡಿದರು.
ಪ್ರತಿಯೊಬ್ಬರೂ ತಂದೆ ತಾಯಿಗಳಲ್ಲಿ ದೇವರನ್ನು ಕಾಣಬೇಕು. ಅವರಿಗಿಂತ ಮಿಗಿಲಾದ ಗುರುವಿಲ್ಲ ಅವರಿಗೆ ಎಷ್ಟೇ ಸಿರಿ ಸಂಪತ್ತು ಕೊಟ್ಟರೂ ಅವರ ಋಣ ತೀರಿಸಲಾಗುವುದಿಲ್ಲ. ಅಲ್ಲದೇ ಡಣಾಪುರ ಗ್ರಾಮದ ಸದ್ಭಕ್ತರು ಸತತವಾಗಿ 23 ವರ್ಷಗಳಿಂದ ಸಾಮೂಹಿಕ ವಿವಾಹ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿರುವುದು ಸಂತೋಷದ ಸಂಗತಿ ಎಂದರು.
ಪಟ್ಟಣದ ಗುರುಪಾದದೇವರ ಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ, ಸರಳ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಬಡ ಕುಟುಂಬಗಳಿಗೆ ವರದಾನವಾಗಲಿವೆ. ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜನೆ ಮೂಲಕ ಸಮಾಜಮುಖಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಡಣಾಪುರ ಗ್ರಾಮಸ್ಥರು ಸೇವೆ ಶ್ಲಾಘನೀಯ ಎಂದರು
ಗರಗ ನಾಗಲಾಪುರ ಗ್ರಾಮದ ಒಪ್ಪತ್ತೇಶ್ವರ ಮಠದ ನಿರಂಜನ ಪ್ರಭು ದೇವರು, ಕೆಪಿಸಿಸಿ ಸದಸ್ಯ ಕುರಿ ಶಿವಮೂರ್ತಿ ಮಾತನಾಡಿದರು. ಈ ಸಾಮೂಹಿಕ ವಿವಾಹದಲ್ಲಿ 11 ಜೋಡಿಗಳು ದಾಪಂತ್ಯ ಜೀವನಕ್ಕೆ ಕಾಲಿಟ್ಟರು. ಗ್ರಾ.ಪಂ.ಅಧ್ಯಕ್ಷ ಎಚ್ ಮಲ್ಲೇಶ್, ಎಸ್. ಕೃಷ್ಣನಾಯ್ಕ, ವ್ಯಾಸನಕೆರೆ ಶ್ರೀನಿವಾಸ್, ಸಿಡಿ ಯಲ್ಲಪ್ಪ, ಡಿ.ಎಂ.ಕೊಟ್ರಯ್ಯ ಸ್ವಾಮಿ, ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ನೀರಳ್ಳಿ ಮಂಜುನಾಥ್, ಗ್ರಾ.ಪಂ. ಉಪಾಧ್ಯಕ್ಷ ಪದ್ಮಾವತಿ ನಾಗರಾಜ್, ಗರಗ ಪ್ರಕಾಶ್, ಅಂಬರೀಶ್, ಗ್ರಾ.ಪಂ.ಸದಸ್ಯರಾದ ಪಾರ್ವತಮ್ಮ ಹನುಮಂತಪ್ಪ, ಬಿ ಬಸವರಾಜ್, ಮಂಜಯ್ಯ ಸ್ವಾಮಿ, ಜ್ಯೋತಿ ಯಮನೂರ, ದುರುಗಮ್ಮ, ದಾಸಪ್ಪ, ಮುಖಂಡರಾದ ಹಳ್ಳಿ ನಿಂಗಪ್ಪ, ಷಣ್ಮುಖ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.



# ಆಟೋ ರಿಕ್ಷಾಗಳು ಪ್ರಯಾಣ ದರಕ್ಕಿಂತ ಹೆಚ್ಚುವರಿ ಹಣ ಪಡೆಯುವಂತಿಲ್ಲ



**ಹಂಪಿ ಟೈಮ್ಸ್ ರಾಯಚೂರು**
ರಾಯಚೂರು ನಗರದ ಆಟೋ ಚಾಲಕರು ಸಾರ್ವಜನಿಕರ ಪ್ರಯಾಣದ ದರವನ್ನು ಪ್ರತಿ ಕಿ.ಮೀ ಗೆ ಸುಮಾರು 15 ರೂ.ಗಳಂತೆ ನಿಗದಿಪಡಿಸಬೇಕು ಮತ್ತು ಕಡ್ಡಾಯವಾಗಿ ಆಟೋ ರಿಕ್ಷಾಗಳ ದಾಖಲೆಗಳನ್ನು ಇಟ್ಟುಕೊಳ್ಳಬೇಕು ಜೊತೆಗೆ ವಾಹವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಎಲ್.ಚಂದ್ರಶೇಖರ ನಾಯಕ ಅವರು ಹೇಳಿದರು.
ಅವರು ಡಿ.5ರ(ಮಂಗಳವಾರ)ದಂದು ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಟೊ ಚಾಲಕರ ಸಂಘಗಳು ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳೊಂದಿಗೆ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಆಟೋ ಚಾಲಕರು ಪ್ರಯಾಣಿಕರನ್ನು ಕರೆದುಕೊಮಡು ಹೋಗಲು ಪ್ರತಿ ಕಿ.ಮೀಗೆ ಸುಮಾರು 15 ರೂ. ಯಂತೆ ದರವನ್ನು ನಿಗದಿಪಡಿಸಿಕೊಳ್ಳಬೇಕು. ರಾತ್ರಿ 10:00 ಗಂಟೆಯಿಂದ ಮುಂಜಾನೆ 5:00 ಗಂಟೆಯವರೆಗೆ ಹೆಚ್ಚುವರಿಯಾಗಿ ಕೇವಲ ಒಂದುವರೆ ಪಟ್ಟು ದರವನ್ನು ನಿಗದಿಪಡಿಸಕೊಳ್ಳಬೇಕು ಎಂದು ತಿಳಿಸಿದರು.
ಕಡ್ಡಾಯವಾಗಿ ಆಟೋರಿಕ್ಷಾದ ಸಂಪೂರ್ಣ ದಾಖಲೆಗಳನ್ನು ಟ್ರಾಫಿಕ್ ಪೊಲೀಸ್ ಠಾಣೆಯಲ್ಲಿ ತೋರಿಸಿ ಆಟೋ ನೊಂದಣಿ ಸಂಖ್ಯೆ ಮತ್ತು ಮಹಿತಿ ಬೋರ್ಡ್ ಪಡೆದುಕೊಳ್ಳಬೇಕು ಮತ್ತು ಪ್ರಾದೇಶಿಕ ಸಾರಿಕೆ ಇಲಾಖೆಯಿಂದ ನಗರದ ಪ್ರಮುಖ ಆಟೋ ರಿಕ್ಷಾ ನಿಲ್ದಾಣಗಳಲ್ಲಿ ದರ ಫಲಕಗಳನ್ನು ಸ್ಥಾಪಿಸಬೇಕು ಮತ್ತು ದರ ಪಟ್ಟಿಯನ್ನು ತೋರಿಸುವ ಕ್ಯೂ ಆರ್ ಕೋಡ್‌ಗಳನ್ನು ಪ್ರತಿ ಅಧಿಕೃತ ಆಟೋ ರಿಕ್ಷಾಗಳಿಗೆ ಒದಗಿಸಬೇಕು ಎಂದು ತಿಳಿಸಿದರು.
ಆಟೋ ರಿಕ್ಷಾದಲ್ಲಿ 3ರಿಂದ 4 ಜನರನ್ನು ಮಾತ್ರ ಹತ್ತಿಸಿಕೊಳ್ಳಬೇಕು ಹೆಚ್ಚುವರಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳುವಂತಿಲ್ಲ ಮತ್ತು 6ರಿಂದ 8 ಶಾಲಾ ಮಕ್ಕಳನ್ನು ಮಾತ್ರ ಆಟೋದಲ್ಲಿ ಕೂರಿಸಿಕೊಳ್ಳಲು ಅವಕಾಶವಿದೆ. ಆಟೋ ಚಾಲಕರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ನೀಡಲು ಇಲಾಖೆಗಳೊಂದಿಗೆ ಚರ್ಚಿಸಲಾಗುವುದು ಎಂದು ತಿಳಿಸಿದರು.
ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್.ಬಿ, ಪ್ರಾದೇಶಿಕ ಸಾರಿಕೆ ಅಧಿಕಾರಿ ವಿನಯಾ ಕಾಟೋಕರ್, ವಾಹನ ನಿರೀಕ್ಷಕ ಬುಗ್ಗಯ್ಯ ರೆಡ್ಡಿ , ಆಟೋ ಚಾಲಕರ ಸಂಘದ ಪದಾಧಿಕಾರಿಗಳು, ಆಟೋ ಚಾಲಕರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಕನ್ನಡ ವಿವಿ ಕುಲಪತಿ ಡಾ. ಡಿ.ವಿ.ಪರಮಶಿವಮೂರ್ತಿಗೆ ರೆವರೆಂಡ್ ಫರ್ಡಿನೆಂಡ್ ಕಿಟೆಲ್ ಪ್ರಶಸ್ತಿ





**ಹಂಪಿ ಟೈಮ್ಸ್ ಹೊಸಪೇಟೆ**
ಜಗತ್ತಿಗೆ ಮೊಟ್ಟ ಮೊದಲ ಬಾರಿಗೆ ಕನ್ನಡ ಪರಿಚಯಿಸಿದ, ಕನ್ನಡ ನಿಘಂಟು ರಚಿಸಿದ ಶ್ರೇಷ್ಠ ಭಾಷಾತಜ್ಞ ಹಾಗೂ ವಿದ್ವಾಂಸರಾದ ರೆವರೆಂಡ್ ಫರ್ಡಿನೆಂಡ್ ಕಿಟೆಲ್ ಅವರ ಹೆಸರಿನ 2023ನೇ ಸಾಲಿನ ಪ್ರಶಸ್ತಿಯನ್ನು ನಾಡಿನ ಶ್ರೇಷ್ಠ ಶಾಸನ ತಜ್ಞರು, ಇತಿಹಾಸಕಾರರು ಹಾಗೂ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಡಿ.ವಿ. ಪರಮಶಿವಮೂರ್ತಿ ಅವರಿಗೆ ನ.31ರಂದು ನೀಡಿ ಗೌರವಿಸಲಾಯಿತು.
68ನೇ ಕರ್ನಾಟಕ ರಾಜ್ಯೋತ್ಸವದ ನೆನಪಿಗಾಗಿ ಸುವರ್ಣ ಕರ್ನಾಟಕ ಸಂಭ್ರಮವನ್ನು ಮೈಕೊ ಕನ್ನಡ ಬಳಗ, ಬಾಷ್ ಸಂಸ್ಥೆಯ ಸಾಂಸ್ಕೃತಿಕ, ಸಾಮಾಜಿಕ ಸಂಘಟನೆ, ಬಾಷ್-ಬಿಡದಿ ಘಟಕವು ಇತ್ತೀಚೆಗೆ ಶಾಸನಶಾಸ್ತ್ರ ಪಿತಾಮಹ ಬಿ.ಎಲ್. ರೈಸ್ ವೇದಿಕೆಯಲ್ಲಿ ಮೈಕೊ ಎಂಪ್ಲಾಯಿಸ್ ಅಸೋಸಿಯೇಷನ್‌ನ ಅಧ್ಯಕ್ಷ ಕಾಮ್ರೆಡ್ ವಿಜೆಕೆ ನಾಯರ್ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಾಧೀಶರಾದ ಡಾ.ಎನ್. ಸಂತೋಷ ಹೆಗ್ಡೆ ಈ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದರು.

# ಬಳ್ಳಾರಿ ವಿಮಾನ ನಿಲ್ದಾಣಕ್ಕೆ ಚಾಲನೆ ನೀಡಿ

## ಎಂಎಲ್‌ಸಿ ವೈ.ಎಂ. ಸತೀಶ್ ಮೇಲ್ಮನೆಯಲ್ಲಿ ಒತ್ತಾಯ

**ಹಂಪಿ ಟೈಮ್ಸ್ ಬಳ್ಳಾರಿ**
ಬಳ್ಳಾರಿಯ ಸಿರಿವಾರ-ಚಾಗನೂರು ಗ್ರಾಮದ 900.96 ಎಕರೆ ಭೂ ಪ್ರದೇಶದಲ್ಲಿ ನೂತನ ವಿಮಾನ ನಿಲ್ದಾಣ ನಿರ್ಮಾಣಕ್ಕಾಗಿ ಡಿಪಿಆರ್ (ಡಿಟೇಲ್ಡ್ ಪ್ರಾಜೆಕ್ಟ್ ರಿಪೋರ್ಟ್) ಸಿದ್ದಪಡಿಸುವ ಪ್ರಸ್ತಾವನೆ ಹಣಕಾಸು ಇಲಾಖೆಯಲ್ಲಿದ್ದು, ಶೀಘ್ರದಲ್ಲೇ ಅನುಮೋದನೆ ಸಿಗಲಿದೆ ಎಂದು ಎಂ.ಬಿ. ಪಾಟೀಲ್ ಅವರು ಸ್ಪಷ್ಟಪಡಿಸಿದ್ದಾರೆ.



ಬಳ್ಳಾರಿ - ವಿಜಯನಗರ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿ, ಎಂಎಲ್‌ಸಿ ವೈ.ಎಂ. ಸತೀಶ್ ಅವರು ಮೇಲ್ಮನೆಯಲ್ಲಿ ಮಂಗಳವಾರ ಕೇಳಿದ ಪ್ರಶ್ನೆಗೆ ಸಚಿವ ಎಂ.ಬಿ. ಪಾಟೀಲ್ ಅವರ ಪರವಾಗಿ ಉತ್ತರ ನೀಡಿದ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಸಚಿವ ಶರಣ ಬಸಪ್ಪ ದರ್ಶನಾಪುರ, ಬಳ್ಳಾರಿ ವಿಮಾನ ನಿಲ್ದಾಣ ನಿರ್ಮಾಣ ಮತ್ತು ಅಭಿವೃದ್ಧಿಗಾಗಿ ಸರ್ಕಾರ ಸ್ವಾಧೀನ ಮಾಡಿಕೊಂಡಿರುವ 806.34 ಎಕರೆ ಭೂಮಿಯನ್ನು ಬಳ್ಳಾರಿ ತಹಸೀಲ್ದಾರರಿಗೆ ಹಸ್ತಾಂತರ ಮಾಡಿ, ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆಯಿಂದ ವಿಮಾನ ನಿಲ್ದಾಣದ ನಿರ್ಮಾಣ ಮತ್ತು ಅಭಿವೃದ್ಧಿಗಾಗಿ ಡಿಪಿಆರ್ (ಡಿಟೇಲ್ಡ್ ಪ್ರಾಜೆಕ್ಟ್ ರಿಪೋರ್ಟ್) ಸಿದ್ಧಪಡಿಸುವ ಪ್ರಸ್ತಾವನೆಯು ಹಣಕಾಸು ಇಲಾಖೆಯಿಂದ ಶೀಘ್ರದಲ್ಲಿಯೇ ಅನುಮೋದನೆ ಸಿಗಲಿದೆ ಎಂದರು.
ವೈ.ಎಂ. ಸತೀಶ್ ಅವರು, ಹರಗಿನಡೋಣಿ - ಕುಡತಿನಿ ಮಧ್ಯದಲ್ಲಿದ್ದ ಹಳೆಯದಾದ ಬಂಡಿಜಾಡು ರಸ್ತೆಯನ್ನು ಅರ್ಸೆಲ್ಲರ್ ಮಿತ್ತಲ್‌ನ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಕಂಪನಿಯ ವಶಕ್ಕೆ ನೀಡಿರುವ ಕಾರಣ ಕಂಪನಿಯು ಈ ರಸ್ತೆಯನ್ನು ಮುಚ್ಚಿದೆ. ಕಂಪನಿಯು ಈ ರಸ್ತೆಯನ್ನು ಮುಚ್ಚಿರುವ ಕಾರಣ ಮೂಲಕ ವಿದ್ಯಾರ್ಥಿಗಳು, ಕೆಪಿಟಿಸಿಎಲ್ ಹಾಗೂ ಇನ್ನಿತರೆ ಕೈಗಾರಿಕೆಗಳಿಗೆ ಕೆಲಸಕ್ಕೆ ಹೋಗುವವರು, ಸುತ್ತಲಿನ ಹಳ್ಳಿಗಳ ಗ್ರಾಮಸ್ಥರು ಸಾಕಷ್ಟು ತೊಂದರೆ ಅನುಭವಿಸುವುದರ ಜೊತೆಯಲ್ಲಿ 30 ಕಿಮೀ ಸುತ್ತ ತಿರುಗಿ ಕುಡತಿನಿ ತಲುಪಬೇಕಾಗಿದೆ. ಮುಚ್ಚಿರುವ ರಸ್ತೆಯನ್ನು ತೆಗೆದು ಹಗರಿನಡೋಣಿಯ ಗ್ರಾಮಸ್ಥರು - ವಿದ್ಯಾರ್ಥಿಗಳು; ಕಾರ್ಮಿಕರು ನಿತ್ಯ ತಿರುಗಾಡಲು ಅವಕಾಶ ಕಲ್ಪಿಸಬೇಕು ಎಂದು ಸದನಕ್ಕೆ ಕೋರಿದರು.
ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಸಚಿವ ಶರಣ ಬಸಪ್ಪ ದರ್ಶನಾಪುರ ಅವರು, ಹರಗಿನಡೋಣಿ ಗ್ರಾಮಸ್ಥರು ಕುಡತಿನಿ ಮಧ್ಯೆ ತಿರುಗಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಸದನಕ್ಕೆ ಉತ್ತರಿಸಿದರು.
ಉತ್ತಮಗಾಲ್ವಾ, ಅರ್ಸೆಲರ್ ಮಿತ್ತಲ್ ಪ್ರಾರಂಭವಾಗದ ಕಾರಣ ಭೂ ನಿರಾಶ್ರಿತ ರೈತರು ಉದ್ಯೋಗ, ಹೆಚ್ಚುವರಿ ಪರಿಹಾರ, ಇನ್ನಿತರೆ ಸೌಲಭ್ಯಗಳಿಗಾಗಿ ಆಗ್ರಹಿಸಿ 345 ದಿನಗಳಿಂದ ಕುಡತಿನಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದು, ಸರ್ಕಾರ ಇವರ ಬೇಡಿಕೆಗಳ ಈಡೇರಿಕೆಗೆ ತುರ್ತಾಗಿ ಕ್ರಮಕೈಗೊಳ್ಳಬೇಕು ಎಂದು ಪರಿಷತ್ ಸದಸ್ಯ ವೈ.ಎಂ. ಸತೀಶ್ ಅವರು ಕೇಳಿದ ಪ್ರಶ್ನೆಗೆ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಸಚಿವ ಶರಣ ಬಸಪ್ಪ ದರ್ಶನಾಪುರ ಅವರು, ಇಂಟಿಗ್ರೇಟೆಡ್ ಸ್ಟೀಲ್‌ಪ್ಲಾಂಟ್ ನಿರ್ಮಾಣ ಮಾಡಲು ಉತ್ತಮಗಾಲ್ವಾ ಫೆರೋಸ್ ಲಿಮಿಟೆಡ್‌ಗೆ 4877.81 ಎಕರೆ ಭೂಮಿಯನ್ನು ಹಂಚಿಕೆ ಮಾಡಲಾಗಿದೆ. ಕೈಗಾರಿಕೆ ನಿರ್ಮಾಣಕ್ಕಾಗಿ ಮಿನಿಸ್ಟ್ರಿ ಆಫ್ ಎನ್ವಿರಾಮ್ಮೆಂಟ್ ಅಂಡ್ ಫಾರೆಸ್ಟ್ (ಎಂಒಇಎಫ್)ನ ಎನ್ವಿರಾಮ್ಮೆಂಟ್ ಕ್ಲಿಯರೆನ್ಸ್‌ನ ಅನುಮತಿಗಾಗಿ ಕಂಪನಿಯು ಅರ್ಜಿ ಸಲ್ಲಿಸಿದ್ದು, ಅನುಮತಿ ಸಿಕ್ಕಿಲ್ಲ. ಭೂ ಸ್ವಾಧೀನದ ಪರಿಹಾರ ಹೆಚ್ಚಳಕ್ಕಾಗಿ ಕೆಲ ರೈತರು ಹೂಡಿರುವ ದಾವೆ ನ್ಯಾಯಾಲಯದಲ್ಲಿದೆ. ಕಾರಣ ಕಂಪನಿಯು ಈ ಯೋಜನೆಯ ಅನುಷ್ಠಾನಕ್ಕಾಗಿ ಹೆಚ್ಚುವರಿಯಾಗಿ 6 ವರ್ಷಗಳ ಕಾಲಾವಕಾಶವನ್ನು ಕೋರಿದೆ. ಈ ಕುರಿತು ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿಯಲ್ಲಿ ಸೂಕ್ತ ನಿರ್ಣಯವನ್ನು ಕೈಗೊಳ್ಳಲಾಗುತ್ತದೆ. ಅರ್ಸೆಲ್ಲರ್ ಮಿತ್ತಲ್‌ನ ವಿಷಯ ಸುಪ್ರೀಂಕೋರ್ಟ್‌ನಲ್ಲಿದೆ ಎಂದು ಉತ್ತರಿಸಿದರು.

ಹಂಪಿ ಟೈಮ್ಸ್
ಇ-ಪೇಪರ್ ಉಚಿತ
ಇಂದೇ ಹಂಪಿ ಟೈಮ್ಸ್ ವಾಟ್ಸ್‌ಪ್ ಚಾನಲ್‌ಗೆ ಸೇರಿ, ಇ-ಪೇಪರ್ ಉಚಿತವಾಗಿ ಪಡೆಯಿರಿ
www.hampitimes.com, epaper.hampitimes.com










Printed by: MANJUNATHA .H .B Published by: A. SHUBHA. Owned by: A. SHUBHA and Printed at: AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA